ಜಾನಪದ- ಯಕ್ಷಗಾನ
ಅಕಾಡೆಮಿ ಪ್ರಶಸ್ತಿ ೨೦೦೬



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಪ್ರಶಸ್ತಿ-೨೦೦೬

ಪ್ರಶಸ್ತಿ ಪುರಸ್ಕೃತರ ಕಿರುಪರಿಚಯ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨

ಅಧ್ಯಕ್ಷರುಗಳ ಅಧಿಕಾರದ ಅವಧಿ

೧.	ಶ್ರೀ ಎಚ್.ಎಲ್. ನಾಗೇಗೌಡ	೦೩.೧೧.೧೯೮೦ ರಿಂದ ೨೫.೦೧.೧೯೮೭
೨.	ಡಾ. ಎಸ್.ಕೆ. ಕರೀಂಖಾನ್	೩೦.೦೭.೧೯೮೭ ರಿಂದ ೩೦.೦೭.೧೯೯೦
೩.	ಡಾ. ಜೀ.ಶಂ. ಪರಮಶಿವಯ್ಯ	೩೦.೧೧.೧೯೯೧ ರಿಂದ ೨೪.೦೧.೧೯೯೫
೪.	ಡಾ. ಎಚ್.ಜೆ. ಲಕ್ಕಪ್ಪಗೌಡ	೧೩.೦೬.೧೯೯೫ ರಿಂದ ೧೩.೦೬.೧೯೯೮
೫.	ಡಾ. ಕಾಳೇಗೌಡ ನಾಗವಾರ	೧೫.೦೬.೧೯೯೮ ರಿಂದ ೧೪.೦೬.೨೦೦೧
೬.	ಡಾ. ಹಿ.ಶಿ. ರಾಮಚಂದ್ರೇಗೌಡ	೨೦.೦೬.೨೦೦೧ ರಿಂದ ೧೩.೦೬.೨೦೦೪
೭.	ಶ್ರೀ ಕೆರೆಮನೆ ಶಂಭುಹೆಗಡೆ	೨೯.೦೩.೨೦೦೫ ರಿಂದ ....

ಜಾನಪದ ಕಲಾ ಸಾಧನಾ ಸಂಪನ್ನರು

ಕಲೆ ಮತ್ತು ಕಲಾವಿದ ಒಂದು ಸಮಾಜದ ಸಂಸ್ಕೃತಿಯ ಪ್ರತಿರೂಪ. ಇವು ನೆಲಮೂಲ ಸಂಸ್ಕೃತಿಯ ಜೀವ ಜೀವಾಳ. ಹಾಗಾಗಿಯೇ ಭಾರತೀಯ ಸಂಸ್ಕೃತಿಯಲ್ಲಿ ಕಲೆ ಹಾಗೂ ಕಲಾವಿದರಿಗೆ ಅನನ್ಯ ಗೌರವ. ಆದಿಯಿಂದಲೂ ರಾಜಮಹಾರಾಜರಾದಿಯಾಗಿ ಎಲ್ಲರೂ ನಾಡಿನ ಸಾಂಸ್ಕೃತಿಕ ಪರಂಪರೆಯ ವಾಹಕಗಳಾದ ಕಲೆ ಮತ್ತು ಕಲಾವಿದರನ್ನು ಆದರಿಸಿ ಗೌರವಿಸುತ್ತಾ ಬಂದಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಅಕಾಡೆಮಿಗಳ ಮೂಲಕ ಕರ್ನಾಟಕ ಸರ್ಕಾರ ಕಲೆ ಹಾಗೂ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಾ ಬಂದಿದೆ. ಇದು ಕನ್ನಡ ಸಂಸ್ಕೃತಿಯ ಹಿರಿಮೆ. ಪ್ರಸಕ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೬ನೇ ಸಾಲಿನ ಪ್ರಶಸ್ತಿಯನ್ನು ಮೂವತ್ತೆರಡು ಜನ ಕಲಾಸಾಧನಾ ಸಂಪನ್ನರಿಗೆ ನೀಡಿ ಗೌರವಿಸುತ್ತಿದೆ. ಅಪಾರ ಸಂಖ್ಯೆಯ ವೈವಿಧ್ಯಮಯ ಕಲೆ-ಕಲಾವಿದರು ಕರ್ನಾಟಕದಾದ್ಯಂತ ಇದ್ದು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನೀಡುವ ಪ್ರಶಸ್ತಿಯ ಸಂಖ್ಯೆ ತೀರ ಕಡಿಮೆ ಎಂಬ ಅರಿವು ನನಗಿದೆ. ಆದರೂ ಒಂದು ಮಿತಿಯೊಳಗೆ ಈ ಆಯ್ಕೆ ನಡೆದಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಸಹಕರಿಸಿದ ಅಕಾಡೆಮಿಯ ಗೌರವಾನ್ವಿತ ಸದಸ್ಯರಿಗೂ, ರಿಜಿಸ್ಟ್ರಾರ್ ಶ್ರೀ ಎಂ. ಮುನಿರಾಜು ಹಾಗೂ ಸಿಬ್ಬಂದಿ ವರ್ಗದವರಿಗೂ ನಾನು ಆಭಾರಿಯಾಗಿದ್ದೇನೆ. ಪ್ರಶಸ್ತಿ ಪುರಸ್ಕೃತ ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿರುವ ಡಾ.ಬಿ.ಎಸ್. ತಲ್ವಾಡಿಯವರಿಗೆ ನನ್ನ ಹೃತ್ಪೂರ್ವಕ ನಮನಗಳು. ಈ ಸಾಲಿನ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿರುವ ನಾಡಿನ ಎಲ್ಲ ಸಾಂಸ್ಕೃತಿಕ ಕಲಾಸಂಪನ್ನರನ್ನು ಗೌರವಾದರಗಳೊಂದಿಗೆ ಅಭಿನಂದಿಸುತ್ತೇನೆ.

ಕೆರೆಮನೆ ಶಂಭುಹೆಗಡೆ
ಅಧ್ಯಕ್ಷರು

೭ನೇ ಏಪ್ರಿಲ್ ೨೦೦೭
ಬೆಂಗಳೂರು



ಶ್ರೀ ಹ.ಕ. ರಾಜೇಗೌಡ

ಡಾ. ಬಿ.ಎಸ್.ಗದ್ದಗಿಮಠ

ಪ್ರಶಸ್ತಿ

ಹನುಮನಹಳ್ಳಿ
ಸಂತೇಬಾಚಳ್ಳಿ ಅಂಚೆ
ಮಂಡ್ಯ ಜಿಲ್ಲೆ - ೫೭೧೪೩೬
ದೂ. ೦೮೨೩೦-೭೬೬೫೧೩

ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೬೪ರಲ್ಲಿ ಕನ್ನಡ ಎಂ.ಎ. ಪದವಿಗಳಿಸಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ಅದೇ ವಿಶ್ವ ವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನಾ ಪ್ರಾಧ್ಯಾಪಕ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುವ ಹನುಮನಹಳ್ಳಿ ಕಪನೀಗೌಡ ರಾಜೇಗೌಡರು ೭.೮.೧೯೩೮ರಲ್ಲಿ ಜನಿಸಿದರು. ತಂದೆ ಕಪನೀಗೌಡ ತಾಯಿ ನಿಂಗಮ್ಮ. ರೈತಾಪಿ ಮನೆತನದಿಂದ ಬಂದ ಶ್ರೀಯುತರು ಎಳೆಯ ಪ್ರಾಯದಿಂದಲೂ ಸಂಶೋಧನಾ ಪ್ರವೃತ್ತಿಯನ್ನು ಬೆಳೆಸಿಕೊಂಡು ಕೃಷಿ ನಿರತರಾಗಿದ್ದಾರೆ.

ಬಾಲ್ಯದಿಂದಲೂ ಅನೇಕ ಸಂಘ ಸಂಸ್ಥೆಗಳ ಸಂಬಂಧವನ್ನು ಬೆಳೆಸಿಕೊಂಡು ಸದಸ್ಯ, ಕಾರ್ಯದರ್ಶಿ, ಉಪಾಧ್ಯಕ್ಷ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದಲ್ಲದೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮಾವೇಶಗಳಲ್ಲಿ ಭಾಗವಹಿಸಿದ್ದಾರೆ. ಮಂಡ್ಯ ಜಿಲ್ಲಾ ಪ್ರಥಮ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷರಾಗಿಯೂ ಗೌರವಿಸಲ್ಪಟ್ಟಿರುವ ಹ.ಕ. ರಾಜೇಗೌಡರು ಕನ್ನಡದ ಯಕ್ಷಗಾನ ಕವಿ ಕೆಂಪಣ್ಣಗೌಡ, ಜಾನಪದ ಮತ್ತು ಇತಿಹಾಸ, ಯಕ್ಷಗಾನದ ಪ್ರಾಚೀನತೆ, ದಕ್ಷಿಣ ಭಾರತದಲ್ಲಿ ಗೊಂಬೆಯಾಟಗಳು, ಊರ ಹೆಸರುಗಳು ಮತ್ತು ಅವುಗಳ ಹಿನ್ನಲೆ ಮುಂತಾದ ೪೫೦ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಅಲ್ಲದೆ ಕಥಾಭಾರತಿ, ಜಗತ್ತಿನ ಜನಪದ ಕಥೆಗಳು, ಮುತ್ತು ತುಂಬೇವು ಕಣಜಕೆ, ಕರಿಭಂಟನ ಕಾಳಗ, ಗ್ರಾಮಚೇತನ ಹೀಗೆ ೪೦ ಕೃತಿಗಳನ್ನು ರಚಿಸಿದ್ದಾರೆ. ೩೬ ವ್ಯಕ್ತಿ ಚಿತ್ರಗಳನ್ನು ಕಡೆದು ನಿಲ್ಲಿಸಿದ್ದಾರೆ. ಇವಲ್ಲದೆ ಪತ್ರಿಕೆಗಳಿಗೆ, ವಿಚಾರ ಸಂಕಿರಣಗಳಿಗೆ ಬರೆದ ಲೇಖನಗಳಿವೆ. ಪ್ರಾಚೀನ ಕಾವ್ಯಗಳಿಗೆ ಬರೆದ ಸಂಶೋಧನಾ ಪೀಠಿಕೆಗಳಿವೆ. ಶ್ರೀ ಕುವೆಂಪು ಕುರಿತ ಲೇಖನಗಳು ಪತ್ರಿಕೆಗಳ ಸಂಪಾದಕತ್ವ, ಸಣ್ಣ ಕಥೆಗಳು, ಸಂದರ್ಶನಗಳು ಹೀಗೆ ಹತ್ತಾರು ವಿಚಾರಗಳ ಕುರಿತ ಅವರ ಲೇಖನಗಳು ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಎತ್ತಿಹಿಡಿಯುವುದರ ಜೊತೆಗೆ ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸಿವೆ.

ಹ.ಕ. ರಾಜೇಗೌಡರು ಮೂಲತಃ ವ್ಯವಸಾಯ ಪ್ರಧಾನ ಸಂಸ್ಕೃತಿಯ ಹಿನ್ನಲೆಯಿಂದ ಬಂದವರಾದ್ದರಿಂದ, ವಚನಗಳಲ್ಲಿ ಕೃಷಿ, ಪ್ರಾಚೀನ ವ್ಯವಸಾಯ ಪದ್ಧತಿ, ಗ್ರಾಮಾಂತರ ಮಳೆ ನಕ್ಷತ್ರಗಳು, ಕರ್ನಾಟಕ ವ್ಯವಸಾಯ ಉಪಕರಣಗಳು, ಕನ್ನಡನಾಡಿನ ಒಕ್ಕಲಿಗರು, ಮಂಡ್ಯ ಜಿಲ್ಲೆಯ ನದೀ ಸಂಸ್ಕೃತಿ ಹೀಗೆ ಅನೇಕಾನೇಕ ಕೃತಿಗಳನ್ನು ಬರೆದಿದ್ದಾರೆ.

ವಿದೇಶ ಪ್ರವಾಸವನ್ನು ಮಾಡಿರುವ ಶ್ರೀ ಹ.ಕ. ರಾಜೇಗೌಡರಿಗೆ ಅನೇಕ ಸನ್ಮಾನಗಳು ಸಂದಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನೀಡುತ್ತಿರುವ ಜಾನಪದ ವಿದ್ವಾಂಸ ಡಾ.ಬಿ.ಎಸ್.ಗದ್ದಗಿಮಠ ಅವರ ಹೆಸರಿನ ಗೌರವ ಪ್ರಶಸ್ತಿಯನ್ನು ಅವರ ಒಟ್ಟಾರೆ ಜಾನಪದ ಸೇವೆಗಾಗಿ ನೀಡಿ ಅಕಾಡೆಮಿ ಅವರನ್ನು ಇಂದು ಗೌರವಿಸಿದೆ.

ಡಾ. ಬಸವರಾಜ ನೆಲ್ಲಿಸರ

ಜಾನಪದ ವಿದ್ವಾಂಸರಾಗಿ, ಕಲಾವಿದರಾಗಿ, ಸಂಘಟಕರಾಗಿ, ನಾಡಿನೆಲ್ಲೆಡೆ ಹೆಸರು ಮಾಡಿರುವ ಡಾ. ಬಸವರಾಜ ನೆಲ್ಲಿಸರ ಅವರು ಅತ್ಯಂತ ಸರಳ ಸಜ್ಜನಿಕೆಯ ವಿನಯವಂತ ವ್ಯಕ್ತಿ, ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಸದಾ ಊರೂರು ತಿರುಗುತ್ತಾ ಕಲಾವಿದರನ್ನು ಸಂಘಟಿಸುತ್ತಾ ಆ ಕಲೆಗಳನ್ನು ಕಲಿಯುತ್ತಾ ಅವುಗಳಿಗೊಂದು ಹೊಸ ರೂಪ ಕೊಟ್ಟು ನಾಗರಿಕ ಜಗತ್ತಿಗೆ ಪರಿಚಯಿಸುತ್ತಾ ಹಲವು ತಂಡಗಳನ್ನು ಕಟ್ಟಿರುವ ಶ್ರೀಯುತರು ಜಾನಪದ ಸಾಂಸ್ಕೃತಿಕ ಲೋಕ ಕಂಡ ಅಪರೂಪದ ವ್ಯಕ್ತಿ. ಜಾನಪದ ಮಹಾಮತ್ಸ್ಯ ಡಾ. ಜೀಶಂಪ ಅವರ ಮೆಚ್ಚಿನ ಶಿಷ್ಯರಾಗಿ, ಪ್ರೊ.ಕು.ಶಿ.ಹರಿದಾಸ ಭಟ್ಟರ ಕಣ್ಣಿಗೆ ಬಿದ್ದು, ಸಾಗರ ತಾಲ್ಲೂಕು ಕಣ್ಣೂರಿನ ಡೊಳ್ಳು ತಂಡವನ್ನು ಕಟ್ಟಿಕೊಂಡು ೧೯೮೭ರಲ್ಲಿ ೩ ತಿಂಗಳು ರಷ್ಯಾ ದೇಶ ಮೆರೆಸಿದ್ದೊಂದು ಇತಿಹಾಸ. ಶಿವಮೊಗ್ಗ ಜಿಲ್ಲೆಯ ಗ್ರಾಮದೇವತೆಗಳು ಇವರ ಪಿಹೆಚ್.ಡಿ. ಪ್ರಬಂಧ. ಇವರ ಮಾರ್ಗದರ್ಶನದಲ್ಲಿ ಈಗಾಗಲೇ ೧೫ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಂಶೋಧನೆ ನಡೆಸಿ ಪಿಹೆಚ್.ಡಿ., ಎಂ.ಫಿಲ್. ಪದವಿಗಳನ್ನು ಪಡೆದಿದ್ದಾರೆ. ಜನಪದ ಕಲಾಕೂಟದ ಮುಖಾಂತರ ವಿದ್ಯಾರ್ಥಿಗಳಲ್ಲಿ ಜನಪದ ಕಲೆಗಳ ಬಗ್ಗೆ ಆಸಕ್ತಿ ಮೂಡುವಂತೆ ಮಾಡಿದ್ದಾರೆ.

ಡಾ. ಜೀಶಂಪ ಪ್ರಶಸ್ತಿ

ಲಂಬಾಣಿಗಳು, ಬಗ್ಗರು, ಆದಿಗಳು, ಸುಡುಗಾಡು ಸಿದ್ದರು ಮುಂತಾಗಿ ಹಲವು ಬುಡಕಟ್ಟುಗಳ ಅಧ್ಯಯನ ಮಾಡಿ ೧೯೮೧ರಲ್ಲೇ ಮೊಟ್ಟ ಮೊದಲಬಾರಿಗೆ ಈ ಜನಾಂಗಗಳ ಬಗ್ಗೆ ವಿಶೇಷ ಅಧ್ಯಯನಕ್ಕೆ ನಾಂದಿ ಹಾಡಿದರು. ಹಾಗೆಯೇ ಜನಪದ ಕತೆಗಳು ಪ್ರಾತಿಹ್ಯಗಳು, ಕಲೆಗಳು, ಹಬ್ಬಹರಿದಿನಗಳು ಮುಂತಾದ ಕ್ಷೇತ್ರದಲ್ಲಿ ಅಪಾರ ಕ್ಷೇತ್ರಕಾರ್ಯ ಮಾಡಿ ಮುವ್ವತ್ತೈದಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ, ಪಾರಂಪರಿಕ ಜ್ಞಾನ ವಿಜ್ಞಾನಗಳ ಅಪೂರ್ವ ಲೋಕಾನುಭವವನ್ನು ದೇಶೀ ಸಂಸ್ಕೃತಿಯ ಸಂಪನ್ನತೆಯನ್ನು ಎತ್ತಿಹಿಡಿದರು. ಸದಾ ಬಗಲಲ್ಲೊಂದು ಬ್ಯಾಗ್ ಹಾಕಿಕೊಂಡು ಊರೂರು ಸುತ್ತುವ ಜನಪದ ಜಂಗಮ, ನೆಲ್ಲಿಸರ ಅವರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕಳೆದ ೨೮ ವರ್ಷಗಳಿಂದ ಕೆಲಸ ಮಾಡುತ್ತಾ ಅದ್ಭುತ ಯಶಸ್ಸು ಸಂಪಾದಿಸಿದ್ದಾರೆ. ಇಂಥವರಿಗೆ ೨೦೦೬ನೇ ಸಾಲಿನ ಡಾ.ಜೀ.ಶಂ.ಪ. ಹೆಸರಿನ ಗೌರವ ಪ್ರಶಸ್ತಿಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನೀಡಿ ಸನ್ಮಾನಿಸಿದೆ.

ನಿರ್ದೇಶಕರು
ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - ೫೭೭ ೪೫೧
ಶಿವಮೊಗ್ಗ ಜಿಲ್ಲೆ

ಶ್ರೀ ಎಸ್. ಪಾಪಣ್ಣ

ದೊಣ್ಣೆ ವರಸೆ

ಶಾಮಣ್ಣನವರ ಮಗ
ಹೊನ್ನಾಗರ ಅಂಚೆ
ಆನೇಕಲ್ ತಾ.
ಬೆಂಗಳೂರು ನಗರ ಜಿಲ್ಲೆ - ೫೬೨ ೧೦೬

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನ ಹೊನ್ನಾಗರ ಗ್ರಾಮದ ಶ್ರೀ ಎಸ್. ಪಾಪಣ್ಣ ಪಾರಂಪರಿಕವಾಗಿ ತಮಗೆ ದತ್ತವಾಗಿ ಬಂದ ದೊಣ್ಣೆವರಸೆಯನ್ನು ಮೈಗೂಡಿಸಿಕೊಂಡು ಬೆಳೆದವರು. ಇವರ ತಂದೆ ಶಾಮಣ್ಣ ದೊಣ್ಣೆವರಸೆಯ ಬಹುದೊಡ್ಡ ಹೆಸರು. ಅವರಿಗೆ ಸಹಾಯಕರಾಗಿ ಪಾಪಣ್ಣ ಬಾಲ್ಯದಲ್ಲಿಯೇ ಈ ಕಲೆಯ ಕಣಕ್ಕಿಳಿದರು. ತಮ್ಮ ಕುಟುಂಬಕ್ಕೆ ಬಳುವಳಿಯಾಗಿ ಬಂದ ಈ ಕಲೆಗಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡರು. "ನನ್ನ ಜೀವನದ ವೃತ್ತಿ ಗುರಿ ದೊಣ್ಣೆ ವರಸೆ" ಎನ್ನುವ ಪಾಪಣ್ಣನವರು ರಾಜ್ಯಾದ್ಯಂತ ಈ ಕಲೆಯನ್ನು ಪ್ರದರ್ಶಿಸುವ ಮೂಲಕ ಇದಕ್ಕೆ ಮರು ರೂಪವನ್ನು ಪಾಪ್ತಿ ಮಾಡಿದ್ದಾರೆ. ತಮಿಳುನಾಡು, ಆಂಧ್ರ ಪ್ರದೇಶಗಳಲ್ಲೂ ಈ ಅಪರೂಪದ ಕಲೆಯನ್ನು ಪ್ರದರ್ಶಿಸಿದ್ದಾರೆ.

ವಹ್ನಿಕುಲ ಸಂಜಾತರಾದ ಶ್ರೀಯುತರು ಅತಿ ಬಡತನದ ಮಧ್ಯದಲ್ಲೂ ಯುವ ಚೇತನಗಳನ್ನು ಕಲೆಹಾಕಿ ಅವರಿಗೆ ದೊಣ್ಣೆ ವರಸೆ ಕಲೆಯ ತರಬೇತಿಯನ್ನು ನೀಡುತ್ತಾ ಬಂದಿದ್ದಾರೆ. ದೊಣ್ಣೆ ವರಸೆಯ ಜೊತೆಗೆ ಕರಗದ ಕುಣಿತ, ಡಿಕಾಂಬರಿ ಕುಣಿತ, ಪಾಳ್ಯಗಾರರ ವೇಶ, ಹುಲಿ ವೇಷಗಳನ್ನು ಹಾಕಿ ಜನಮನವನ್ನು ಗೆದ್ದಿದ್ದಾರೆ. ಸುಮಾರು ನಲವತ್ತು ವರ್ಷಗಳ ಕಾಲ ದೊಣ್ಣೆ ವರಸೆ ಕಲೆಯನ್ನು ಬೆಳೆಸಿ ಉಳಿಸಿಕೊಂಡು ಬಂದಿರುವ ಶಾಮಣ್ಣನವರ ಮಗ ಪಾಪಣ್ಣನವರಿಗೆ ಅನೇಕ ಬಹುಮಾನಗಳು ಬಂದಿವೆ. ಇದೀಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಸಾಲಿನ ಪ್ರಶಸ್ತಿ ಅವರ ಮುಡಿಯೇರಿದೆ. ಇದು ಅವರಲ್ಲಿನ ಕಲೆಗೆ ಸಂದ ಗೌರವವಾಗಿದೆ.



ಶ್ರೀ ಪಳನಿಸ್ವಾಮಿ

ಕಂಸಾಳೆ ಕುಣಿತ

ಹೊಸದೊಡ್ಡಿ ಗ್ರಾಮ
ಕನಕಪುರ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕಂಸಾಳೆ ಪಳನಿಸ್ವಾಮಿ ಎಂದೇ ಖ್ಯಾತರಾದ ಪಳನಿಸ್ವಾಮಿ ಕಂಸಾಳೆಯನ್ನು ಗುರುಮುಖದಿಂದ ಕಲಿಯದೇ ಆ ಕ್ಷೇತ್ರವನ್ನು ಪ್ರವೇಶಿಸಿದವರು. ಇವರ ಕಲಾಪ್ರತಿಭೆಯನ್ನು ಕಂಡು ದಿ. ಕಂಸಾಳೆ ಚಾಮಯ್ಯನವರು ಇವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡು ಇವರಿಗೆ ತಮ್ಮ ವಿದ್ಯೆಯನ್ನೆಲ್ಲಾ ಧಾರೆಯೆರೆದರು. ಅಂದಿನಿಂದ ಪಳನಿಸ್ವಾಮಿ ನಿರಂತರವಾಗಿ ಕಂಸಾಳೆಯನ್ನು ನುಡಿಸುತ್ತಾ ಸುಶ್ರಾವ್ಯವಾಗಿ ಹಾಡುತ್ತಾ ಅಪಾರ ಜನಮನ್ನಣೆ ಗಳಿಸಿದರು.

ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ, ಕೋಡಿಹಳ್ಳಿ, ಹೋಬಳಿಯ ಹೊಸದೊಡ್ಡಿ ಗ್ರಾಮಕ್ಕೆ ಸೇರಿದ ಶ್ರೀಯುತರು, ವ್ಯವಸಾಯದ ಜೊತೆಗೆ ವ್ಯಾಪಾರವನ್ನೂ ಮೈಗೂಡಿಸಿಕೊಂಡು ಕಂಸಾಳೆ ಕಲೆಯನ್ನು ಯುವ ಜನಾಂಗಕ್ಕೆ ಕಲಿಸಿಕೊಡುವುದಕ್ಕಾಗಿ ತಮ್ಮ ಸಂಪಾದನೆಯನ್ನು ವ್ಯಯಿಸಿದರು. ಸುಮಾರು ನಲವತ್ತು ಐವತ್ತು ಮಂದಿ ಯುವಕರಿಗೆ ಜನಪದ ಕಲೆಗಳ ಹುಚ್ಚು ಹಿಡಿಸಿದರು. ಆಶ್ರಮವೊಂದನ್ನು ಕಟ್ಟಿ ಭಜನೆ ಹಾಗೂ ತತ್ತ್ವಪದಗಳಿಗೆ ಆವಾಸ ಸ್ಥಾನವನ್ನು ಕಲ್ಪಿಸಿದರು.

ಅಖಿಲ ಭಾರತ ಮಟ್ಟದ ಅನೇಕ ಸಮ್ಮೇಳನಗಳಲ್ಲಿ ಇವರು ಕಂಸಾಳೆ ಪದಗಳನ್ನು ಪ್ರಸ್ತುತಪಡಿಸಿದ್ದಾರೆ. ತಮ್ಮ ಕಂಸಾಳೆ ಗುರು ಚಾಮಯ್ಯನವರ ನೆನಪಿಗೆ ಜಾನಪದ ಕಲಾಮೇಳವನ್ನು ಇವರು ಪ್ರತಿವರ್ಷ ನಡೆಸುತ್ತಾರೆ. ಪಳನಿಸ್ವಾಮಿಯವರ ಜಾನಪದ ಪ್ರೀತಿಗೆ ಸಂದ ಗೌರವ ಪ್ರಸಕ್ತ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಪ್ರಶಸ್ತಿ.



ಶ್ರೀ ಕೆ.ಗೂಳೆಪ್ಪ

ಬಿನ್ ಕರಿಯಪ್ಪ

ಕೋಲಾಟ

ಅಂಕತಟ್ಟಹಳ್ಳಿ
ಬೇತಮಂಗಲ ಹೋಬಳಿ
ಬಂಗಾರಪೇಟೆ ತಾಲ್ಲೂಕು
ಕೋಲಾರ ಜಿಲ್ಲೆ

ಸುಮಾರು ಎಪ್ಪತ್ತೆಂಟು ವರ್ಷ ವಯಸ್ಸಿನ ಶ್ರೀ ಕೆ. ಗೂಳೆಪ್ಪ ಬಿನ್ ಕರಿಯಪ್ಪನವರು ಕೋಲಾರ ಜಿಲ್ಲೆಯ ಬಂಗಾರ ಪೇಟೆ ತಾಲ್ಲೂಕಿನ ಅಂಕ ತಟ್ಟಿಹಳ್ಳಿಯವರು. ತಮ್ಮ ಹದಿನಾರನೇ ವಯಸ್ಸಿನಲ್ಲಿ ಕೋಲಾಟವನ್ನು ಕಲಿತು ಅದನ್ನೇ ತಮ್ಮ ಉಸಿರಾಗಿಸಿಕೊಂಡು ಬೆಳೆದು ಬಂದವರು. ವ್ಯವಸಾಯ ವೃತ್ತಿಯ ಜೊತೆಗೆ ಕೋಲಾಟವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಅನೇಕ ಕೋಲಾಟದ ತಂಡಗಳನ್ನು ಕಟ್ಟಿ ಕರ್ನಾಟಕದಾದ್ಯಂತ ಪ್ರದರ್ಶನ ನೀಡಿ ಕಲಾರಸಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕೋಲಾಟದ ತಂಡಗಳಿಗೆ ನೆಲೆಬೆಲೆಗಳನ್ನು ತಂದುಕೊಟ್ಟು, ಹಬ್ಬ ಹರಿದಿನಗಳಲ್ಲಿ, ಕಲೋತ್ಸವಗಳಲ್ಲಿ ಕೋಲಾಟ ಆಡಿಸಿದ್ದಾರೆ. ನೂರಾರು ಕೋಲು ಪದಗಳನ್ನು ಹೊಟ್ಟೆಗೆ ಹಾಕಿಕೊಂಡಿರುವ ಗೂಳೆಪ್ಪ ಜನಪದ ಪೌರಾಣಿಕ ನಾಟಕಗಳಲ್ಲಿ ಪಾತ್ರಧಾರಿಗಳಾಗಿ ಮೆರೆದಿದ್ದಾರೆ. ದುರ್ಯೋಧನ, ರಾವಣಾಸುರ ಮತ್ತು ಭೀಮನ ಪಾತ್ರಗಳೆಂದರೆ ಇವರಿಗೆ ಇಷ್ಟ.

ಬಣ್ಣದ ಜಗತ್ತಿನಲ್ಲಿ ಮಿರಿ ಮಿರಿ ಮಿಂಚುವ ಗೂಳೆಪ್ಪ ಕೋಲು ಹಿಡಿದು, ಗೆಜ್ಜೆಕಾಲುಗಳನ್ನು ಎತ್ತಿಡುತ್ತಾ ಕುಣಿದರೆ ಜನ ಇಂದಿಗೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಾರೆ. ಶ್ರೀಯುತರಿಗೆ ಅನೇಕ ಪ್ರಶಸ್ತಿಗಳು ದೊರಕಿವೆ. ಈಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರೆತಿರುವುದು ಅವರ ಕಲಾ ಸೇವೆಗೆ ಸಂದ ಸನ್ಮಾನವಾಗಿದೆ.



ಶ್ರೀ ನಲ್ಲೂರು ಕೆ. ಬೆಟ್ಟಪ್ಪ

ಭಾಗವಂತಿಕೆ

ನಲ್ಲೂರು ಗ್ರಾಮ
ಚೇಳೂರು ಅಂಚೆ
ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ ೫೭೨ ೧೧೭

ಮೂರು ತಲೆಮಾರುಗಳ ಕಾಲ ನಿರಂತರ ಯಕ್ಷಗಾನ ಭಾಗವಂತಿಕೆಯನ್ನು ಜೀವನದ ಅವಿಭಾಜ್ಯ ಅಂಗವಾಗಿ ಬೆಳೆಸಿಕೊಂಡು ಬರುತ್ತಿರುವ ತುಮಕೂರು ಜಿಲ್ಲೆಯ ಅಪರೂಪದ ಕಲಾವಿದ ನಲ್ಲೂರಿನ ಶ್ರೀ ಎನ್.ಕೆ. ಬೆಟ್ಟಪ್ಪ. ಇವರ ತಾತ ನಿಂಗೇಗೌಡ, ತಂದೆ ಕೆಂಪೇಗೌಡರು ಸಹ ಭಾಗವತರೇ. ಭಾಗವತ ಪರಂಪರೆಯಲ್ಲಿ ಬೆಳೆದು ಬಂದ ಹಿರಿಮೆ ಬೆಟ್ಟಪ್ಪನವರದು. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಗೆ ಸೇರಿದ ನಲ್ಲೂರು ಇವರ ಮೂಲಗ್ರಾಮ. ಭಾಗವಂತಿಕೆಗಾಗಿ ತುಮಕೂರು ಜಿಲ್ಲೆಯಾದ್ಯಂತ ಸಂಚರಿಸಿ ಅಲೆಮಾರಿಯಾಗಿ ಬದುಕು ಸವೆಸಿದರು. ತಾತ ಮತ್ತು ತಂದೆಯಿಂದ ಪ್ರಭಾವಿತರಾಗಿ, ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ರಕ್ತಗತವಾಗಿಸಿಕೊಂಡು ತಮ್ಮ ಇಪ್ಪತ್ತನೇ ವಯಸ್ಸಿಗೆ ಭಾಗವತರಾಗಿ ಹಟ್ಟ ಏರಿದ ಬೆಟ್ಟಪ್ಪ ಅವರಿಗೆ ಈಗ ತೊಂಬತ್ತರ ಪ್ರಾಯ. ದನಿ ಕುಗ್ಗಿದೆ, ಮಾತು ತೊದಲುತ್ತದೆ, ಆದರೆ ಉತ್ಸಾಹ ಪುಟಿದೇಳುತ್ತದೆ. ಇದೇ ಇವರ ಕಲಾಪ್ರೌಢಿಮೆಯ ಹಿರಿತನ.

ದಕ್ಷಯಜ್ಞ, ಬಾಣಾಸುರ, ಗಿರಿಜಾಕಲ್ಯಾಣ, ದೇವಿಮಹಾತ್ಮೆ, ಅಭಿಮನ್ಯು ಕಾಳಗ, ಭಸ್ಮಾಸುರ, ಲವಕುಶರ ಕಾಳಗ, ದುಶ್ಯಾಸನ ಕಾಳಗ, ಕರಿಭಂಟ ಹೀಗೆ ನೂರಾರು ಯಕ್ಷಗಾನ ಪ್ರಸಂಗಗಳು ಅವರ ಎದೆಯಾಳದಲ್ಲಿ ಗೂಡುಕಟ್ಟಿವೆ. ಹತ್ತಾರು ಜನ ಶಿಷ್ಯರನ್ನು ಪಡೆದಿರುವ ಬೆಟ್ಟಪ್ಪ ತಮ್ಮ ಮಕ್ಕಳಲ್ಲಿ ಯಾರೂ ಭಾಗವತರಾಗಲಿಲ್ಲವಲ್ಲ ಎಂದು ಕೊರಗುತ್ತ, ಮೊಮ್ಮಕ್ಕಳಲ್ಲಾದರೂ ಈ ಕಲೆಯು ಮೂಡಬಹುದೇನೊ ಎಂದು ಕನಸು ಕಾಣುತ್ತಾ ಸಂಸಾರದ ಭಾರವನ್ನು ಹೊತ್ತು ನಡೆದಿದ್ದಾರೆ.

ಯಕ್ಷಗಾನ ಕಲೆಗಾಗಿ ತಮ್ಮನ್ನೇ ಬರಿದು ಮಾಡಿಕೊಂಡು ಭಾಗವಂತಿಕೆಯ ಬದುಕಿನಲ್ಲಿ ಸುಖವನ್ನು ಕಂಡ ನಾಡಿನ ಹಿರಿಯ ಕಲಾವಿದರಾದ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಗೌರವ ಪ್ರಶಸ್ತಿ, ಇವರ ಕಲಾ ದಕ್ಷತೆಗೆ ಸಂದ ಯಕ್ಷಕಿರೀಟವಾಗಿದೆ.

ಶ್ರೀ ಜಿ. ಶಿವಪ್ಪ

ವೀರಗಾಸೆ

ಶ್ರೀ ಶಾರದಾ ಭವನ
ಜಿ.ಸಿ.ಆರ್. ಬಡಾವಣೆ
ಚಿತ್ರದುರ್ಗ ೫೭೭ ೫೦೧

ಕನ್ನಡ ನಾಡಿನ ಪ್ರಮುಖ ವೀರಗಾಸೆ ಕಲಾವಿದರಲ್ಲಿ ಚಿತ್ರದುರ್ಗದ ಜಿ. ಶಿವಪ್ಪ ಒಬ್ಬರು. ಶ್ರೀಯುತರು ತಮ್ಮ ಹತ್ತನೇ ವರ್ಷದಿಂದ ವೀರಗಾಸೆ ಕಲೆಯನ್ನು ರೂಢಿಸಿಕೊಂಡು ಆ ಭಾಗದ ಜನರ ಅಪಾರ ಕೀರ್ತಿಗೆ ಪಾತ್ರರಾಗಿದ್ದಾರೆ.

ಚಿತ್ರದುರ್ಗ ತಾಲ್ಲೂಕು ಸೊಲ್ಲಾಪುರ ಗ್ರಾಮದಲ್ಲಿ ವೀರಗಾಸೆ ಕಲಾವಿದ ಗೌಡ್ರ ಬಸಪ್ಪ ಮತ್ತು ಶಿವಮ್ಮ ದಂಪತಿಗಳ ಪುತ್ರರಾದ ಇವರು ಸ್ವತಃ ತಮ್ಮ ತಂದೆಯಿಂದಲೇ ಕಲಾದೀಕ್ಷೆ ಯನ್ನು ಪಡೆದರು. ನಾಡಿನ ಕಲಾವಿದರ ಒಡನಾಟ, ಮಾರ್ಗದರ್ಶನ ಹಾಗೂ ಸ್ವಪ್ರಯತ್ನದಿಂದ ಬೆಳೆದು ವೀರಗಾಸೆ ಕಲೆಯಲ್ಲಿ ನೈಪುಣ್ಯವನ್ನು ಗಳಿಸಿದರು. ತಮ್ಮ ವೇಷಭೂಷಣ ಗಳು, ಅಲಂಕಾರ, ಅಂಗವಿನ್ಯಾಸ, ಕರವಿನ್ಯಾಸ, ನೃತ್ಯಭಂಗಿಗಳು, ಭಾವ ಪ್ರಚೋದನಾ ವಿಧಾನ, ಕಂಗಳ ಚಲನೆ, ಖಡ್ಗ ವಚನಾಶೈಲಿ ಹಾಗೂ ಪಾದಘಾತಗಳಿಂದ ಜನಾಕರ್ಷಿತರಾದರು.

ಕರ್ನಾಟಕದ ಉದ್ದಗಲಕ್ಕೂ ಸುತ್ತಾಡಿರುವ ಶ್ರೀಯುತರು ಹೊರರಾಜ್ಯಗಳಲ್ಲೂ ಈ ಕಲೆಯ ಪ್ರದರ್ಶನ ನೀಡಿದ್ದಾರೆ. ಕನ್ನಡ, ತೆಲುಗು, ಹಿಂದೂಸ್ತಾನಿ, ಉರ್ದು, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಖಡ್ಗ ವಚನಗಳನ್ನು ಸುಲಲಿತವಾಗಿ ಹಾಡಬಲ್ಲರು. ಇವರು ವೀರಗಾಸೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಲೆಕ್ಕವಿಲ್ಲದಷ್ಟು ಪಾರಿತೋಷಕಗಳನ್ನು ಪಡೆದಿರುವರು. ನಾಡಿನ ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಪ್ರಸಕ್ತ ಸಾಲಿನ ಪ್ರಶಸ್ತಿಯನ್ನು ನೀಡುವ ಮೂಲಕ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವರ ಕಲಾ ಪ್ರೌಢಿಮೆಯನ್ನು ಪುರಸ್ಕರಿಸಿದೆ.

ಶ್ರೀಮತಿ ಚಂದಮ್ಮ

ಸೋಬಾನೆ

ಮಾಳೇನಹಳ್ಳಿ ಗ್ರಾಮ
ಭದ್ರಾವತಿ ತಾಲ್ಲೂಕು
ಶಿವಮೊಗ್ಗ ಜಿಲ್ಲೆ

ಹಳ್ಳಿಗಾಡಿನ ಸಾಂಸ್ಕೃತಿಕ ಜಗತ್ತಿಗೆ ಮಣ್ಣಿನ ಮಕ್ಕಳ ದನಿಬನಿಯನ್ನು ಪರಿಚಯಿಸುವ ಕಾಯಕ ಜೀವಿ ಶ್ರೀಮತಿ ಸೋಬಾನೆ ಚಂದಮ್ಮ. ನಾಗರಿಕ ತೆಕ್ಕೆಗೆ ಸಿಕ್ಕಿದ ಮದುವೆ ಮಂಜಿಗಳಲ್ಲಿ ಸೋಬಾನೆಯಂಥ ಶುಭಕಾಮನೆಯ ಹಾಡು ಇಂದು ಮರೆಯಾಗುತ್ತಿದೆ. ಅದಕ್ಕೆ ಕಾಯಕಲ್ಪ ನೀಡುವ ಜನರೂ ವಿರಳಾತಿ ವಿರಳರಾಗಿರುವಾಗ ಚಂದಮ್ಮ ತಮ್ಮ ಮಧುರ ಕಂಠದಿಂದ ಅದಕ್ಕೆ ಅದರದೇ ಅಂದಚಂದವನ್ನು ತಂದು ಕೊಡಲು ಪ್ರಾರಂಭಿಸಿದ್ದಾರೆ. ತಮ್ಮೊಡನೆ ಸೊಲ್ಲು ಹಾಡುವವರನ್ನು ಪ್ರಧಾನ ಗಾಯಕಿಯರನ್ನಾಗಿಸುತ್ತ ಸೋಬಾನೆಯನ್ನು ಹಾಡುವ ಪಡೆಯನ್ನೇ ಇವರು ಕಟ್ಟಿದ್ದಾರೆ.

ಆಕಾಶವಾಣಿ ಕಲಾವಿದೆಯೂ ಆದ ಚಂದಮ್ಮ ಸೋಬಾನೆ ಹಾಡಲು ಆರಂಭಿಸಿದರೆ ಜನ ಸಮಯಾಸಮಯವೆನ್ನದೆ ಸದ್ದು ಹೊಡೆದು ನಿಲ್ಲುತ್ತಾರೆ. ನಾಡಿನ ಅನೇಕ ಸೋಬಾನೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದಿರುವ ಇವರು ಬಹುಮಾನ್ಯ ಕಲಾವಿದೆ. ಭದ್ರಾವತಿ ತಾಲ್ಲೂಕಿನ ಮಾಳೇನಹಳ್ಳಿ ವಾಸಿಯಾದ ಇವರು ಶ್ರೀರಂಗಪ್ಪನವರ ಧರ್ಮಪತ್ನಿ.

ಸೋಬಾನೆ ಕಲೆಯನ್ನು ಉಳಿಸಿಬೆಳೆಸುವಲ್ಲಿ ತಮ್ಮದೇ ರೀತಿಯಲ್ಲಿ ಸಾಧನೆ ಗೈದಿರುವ ಶ್ರೀಮತಿ ಚಂದ್ರಮ್ಮನವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದೆ.

ಶ್ರೀ ಮಾಳ್ಗಿ ಚೆನ್ನಬಸಪ್ಪ
ಚಿಗಟೇರಿ

ಗೊರವ ಕುಣಿತ

ಚಿಗಟೇರಿ ಗ್ರಾಮ,
ಹರಪನ ಹಳ್ಳಿ ತಾಲ್ಲೂಕು
ದಾವಣಗೆರೆ ಜಿಲ್ಲೆ.

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಚಿಗಟೇರಿ ಗ್ರಾಮದ ಶ್ರೀ ಮಾಳ್ಗಿ ಚನ್ನಬಸಪ್ಪ ಚಿಗಟೇರಿ ಅವರು ನಿರಕ್ಷರ ಕುಕ್ಷಿಗಳು. ಊರಿನ ಶ್ರೀಮಂತರ ಮನೆಯಲ್ಲಿ ಕೂಲಿ ನಾಲಿ ಮಾಡಿ ಜೀವನ ಸಾಗಿಸುವ ಶ್ರೀಯುತರು ಬಾಲ್ಯದಲ್ಲಿ ದನ ಕಾಯುತ್ತಾ ಕೋಲಾಟದ ಪದಗಳನ್ನೂ ಕೋಲಾಟವನ್ನೂ ಕಲಿತರು. ಕೆಂಚಪ್ಪ ದ್ಯಾಮನಗೌಡರ ಮನೆದೇವರಾದ ಮೈಲಾರಲಿಂಗನ ಮುದ್ರೆ ಹೊತ್ತು, ದೇವರ ಮಲ್ಡಿ ಹೊರುತ್ತಾ ಕೊಳಲು ನುಡಿಸುವುದನ್ನು ಕಲಿತರು. ಕೊಳಲಿನ ಜೊತೆಗೆ ಗೊರವರ ಕುಣಿತವನ್ನೂ ಕಲಿತರು. ಇದು ಅವರ ವೃತ್ತಿಯೇ ಆಯಿತು. ಆಕಾಶವಾಣಿ ಕಲಾವಿದರಾಗಿ ಕೊಳಲು ನುಡಿಸುತ್ತಾ, ಹಾಡು ಹೇಳುವ ಶ್ರೀಯುತರು ನಾಡಿನ ಅನೇಕ ಸಾಂಸ್ಕೃತಿಕ ವೇದಿಕೆಯ ಮೇಲೆ ತಮ್ಮ ಕಲಾ ಕೌಶಲ್ಯವನ್ನು ಮೆರೆದಿದ್ದಾರೆ.

'ಶ್ರೀಗಂಧ' ದೂರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಈ ಮೈಲಾರ ಲಿಂಗನ ಹಾಡುಗಾರ ತನ್ನ ಹಾಡಿನ ಮೋಡಿಯನ್ನು ನಾಡಜನತೆಯ ಮುಂದೆ ಪ್ರದರ್ಶಿಸಿ ನೋಡುಗರನ್ನು ಮಂತ್ರ ಮುಗ್ಧ ರನ್ನಾಗಿಸಿದ್ದಾರೆ. ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನಗಳನ್ನು ಗಿಟ್ಟಿಸಿದ್ದಾರೆ. ಶ್ರೀ ಚನ್ನಬಸಪ್ಪ ಚಿಗಟೇರಿಯವರನ್ನು ಅನೇಕ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಶ್ರೀಯುತರಿಗೆ ಪ್ರಶಸ್ತಿ ನೀಡಿ ಅವರ ಕಲಾ ಪ್ರತಿಭೆಯನ್ನು ಪುರಸ್ಕರಿಸಿದೆ.

ಶ್ರೀಮತಿ ಮುನಿಯಮ್ಮ

ಕಿಳ್ಳೇಕ್ಯಾತರ ಹಿಮ್ಮೇಳ

ಹನುಮಂತಪ್ಪನವರ ಪತ್ನಿ
ಏಕಲವ್ಯನಗರ, ಕಲಾವಿದರ ನಿರಾಶ್ರಿತ
ಶಿಬಿರ, ಮೇಟಗಳ್ಳಿ ಅಂಚೆ,
ಮೈಸೂರು ೫೭೦ ೦೧೮

ಮೈಸೂರಿನ ಏಕಲವ್ಯ ನಗರದ ಕಲಾವಿದರ ನಿರಾಶ್ರಿತ ಶಿಬಿರವಾಸಿಯಾದ ಶ್ರೀಮತಿ ಮುನಿಯಮ್ಮ ಕಿಳ್ಳೇಕ್ಯಾತ - ಗೊಂಬೇ ರಾಮ ಸಮುದಾಯದ ಪ್ರಸಿದ್ಧ ಕಲಾವಿದೆ. ಬಾಲ್ಯದಲ್ಲಿಯೇ ಇವರು ತಮ್ಮ ಕುಲಕಸುಬಾದ ತೊಗಲು ಗೊಂಬೆಯಾಟವನ್ನು ಶ್ರದ್ಧಾಸಕ್ತಿಯಿಂದ ಕಲಿತರು. ದೊಂಬಿದಾಸ ಸಮುದಾಯದ ಸಿರಾಗ್ರಾಮವಾಸಿ ಶ್ರೀ ಚನ್ನಪ್ಪನವರಿಂದ ಹಾರ್ಮೋನಿಯಂನ್ನು, ಕಲಾವಿದ ಶ್ರೀ ಸಂಜೀವರಾಯನವರಿಂದ ನಾಟಕದ ಕಲೆಯನ್ನು ಮುನಿಯಮ್ಮ ಕಲಿತರು. ಸ್ತ್ರೀಯರು ನಾಟಕಗಳಲ್ಲಿ ಪಾತ್ರ ಮಾಡುವುದು ಅವಮಾನವೆಂದುಕೊಂಡಿದ್ದ ಕಾಲದಲ್ಲಿ ಇವರು ರಂಗ ಪ್ರವೇಶಮಾಡಿ ಅನೇಕ ಪಾತ್ರಗಳನ್ನು ಮಾಡಿದ್ದಾರೆ. ರಂಗ ಗೀತೆಗಳನ್ನು ಹಾಡಿದ್ದಾರೆ.

ತಮ್ಮ ಪತಿ ಹನುಮಂತಯ್ಯನವರ ಪ್ರೋತ್ಸಾಹ ಜನಸಾಮಾನ್ಯರ ಉತ್ಸಾಹಭರಿತ ಪ್ರೇರಣೆಯಿಂದ ಇವರು ಹಿರಣ್ಯಕಶಿಪು, ಕಂಸ ಸಂವಾದ, ಭೂದೇವಿ, ಹೇಮರೆಡ್ಡಿ ಮಲ್ಲಮ್ಮ ಮುಂತಾದ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿದ್ದಾರೆ. ಹಿಮ್ಮೇಳ ರಂಗ ಕಲಾವಿದರಾಗಿ ಪ್ರಸಿದ್ಧರಾಗಿದ್ದಾರೆ.

ಸು.೭೨ ವರ್ಷ ವಯಸ್ಸಿನ ಶ್ರೀಮತಿ ಮುನಿಯಮ್ಮ ತಮ್ಮ ಬದುಕಿನ ಮುಸ್ಸಂಜೆಯಲ್ಲೂ ಜನಪದ ಕಲೆಗೆ ತಮ್ಮನ್ನೇ ತಾವು ಒಡ್ಡಿಕೊಳ್ಳುತ್ತಾರೆ. ಇವರ ಕಲಾಪ್ರತಿಭೆಯನ್ನು ಗುರುತಿಸಿ ಈ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಅವರನ್ನು ಗೌರವಿಸಿದೆ.



ಶ್ರೀ ಪುಟ್ಟೇಗೌಡ

ಪೂಜಾ ಕುಣಿತ

ದೊಡ್ಡೈದೇಗೌಡರ ಮಗ
ಕಾರಸುವಾಡಿ ಗ್ರಾಮ
ಸಂತೆ ಕಸತಗೆರೆ ಅಂಚೆ
ಮಂಡ್ಯ ಜಿಲ್ಲೆ

ಸುಮಾರು ೭೫ ವರ್ಷ ವಯಸ್ಸಿನ ಪುಟ್ಟೇಗೌಡರು ಮಂಡ್ಯ ಜಿಲ್ಲೆಯ ಕಾರಸುವಾಡಿ ಗ್ರಾಮದ ದೊಡ್ಡೈದೇಗೌಡ ಮತ್ತು ದೇವಮ್ಮನವರ ಸುಪುತ್ರ. ಕುಲಕಸುಬಾದ ವ್ಯವಸಾಯದ ಜೊತೆಗೆ ಜನಪದ ಕಲೆಯನ್ನು ಮೈಗೂಡಿಸಿಕೊಂಡು ಬೆಳೆದವರು. ಬಾಲ್ಯದಿಂದಲೇ ಜನಪದ ಕಲಾವಿದರ ಒಡನಾಟದೊಂದಿಗೆ ಬೆಳೆದ ಶ್ರೀಯುತರು ದೊಣ್ಣೆವರಸೆ, ಕೋಲಾಟ, ರಂಗಕುಣಿತ, ಒನಕೆಕುಣಿತ, ಪೂಜಾಕುಣಿತ ಮುಂತಾದ ಕಲಾ ಪ್ರಕಾರಗಳನ್ನು ಕಲಿತರು. ಕಲಿತದ್ದನ್ನು ಪ್ರದರ್ಶಿಸಿದರು. ತಮ್ಮಲ್ಲಿನ ಕಲೆಯನ್ನು ಇತರರಿಗೆ ಕಲಿಸಿದರು. ಜನಪದ ಕತೆ ಹೇಳುವುದ ರಲ್ಲಿಯೂ ಇವರದು ಎತ್ತಿದ ಕೈ.

ಅನೇಕಾನೇಕ ಸಂಘ ಸಂಸ್ಥೆಗಳ ಕಾರ್ಯಕ್ರಮದಲ್ಲಿ ಜನಪದ ಕಲಾ ಪ್ರದರ್ಶನ ಮಾಡಿರುವ ಪುಟ್ಟೇಗೌಡರು ಕರ್ನಾಟಕ ಸರ್ಕಾರದ ಅನೇಕ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ತಮ್ಮ ಕಲಾಪ್ರತಿಭೆಯನ್ನು ಮೆರೆದಿದ್ದಾರೆ. ರಾಜ್ಯಾದ್ಯಂತ ಸಂಚರಿಸಿ ತಮ್ಮ ಕಲಾಕೌಶಲ್ಯವನ್ನು ತೋರಿಸಿದ್ದಾರೆ.

ಅನೇಕ ಪ್ರಮುಖ ಸಂಘ ಸಂಸ್ಥೆಗಳ ಗೌರವ, ಸನ್ಮಾನಗಳನ್ನು ಪಡೆದಿರುವ ಶ್ರೀಯುತರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಸಾಲಿನ ಪ್ರಶಸ್ತಿ ದೊರೆತಿರುವುದು ಅವರಿಗೆ ಸಂತೋಷವನ್ನು ತಂದಿದೆ.

ಶ್ರೀ ಸಿ.ಗೋಪಾಲಕೃಷ್ಣಶಾಸ್ತ್ರಿ

ಯಕ್ಷಗಾನ

ಶಾಂತಿ ನಿಲಯ
ಮೂಡಂಬೈಲು, ಅಡ್ಯನಡ್ಕ
ದಕ್ಷಿಣ ಕನ್ನಡ-೫೭೪೨೬೦

ಗೋಪಾಲಕೃಷ್ಣಶಾಸ್ತ್ರಿಯವರು ಯಕ್ಷಗಾನ ಕಲೆಯ ಅರ್ಥಧಾರಿಯಾಗಿ ಹೆಸರು ಗಳಿಸಿದವರು. ಇವರ ತಂದೆ ಚಕ್ರಕೋಡಿ ವೆಂಕಟ್ರಮಣ ಶಾಸ್ತ್ರಿ, ತಾಯಿ ಪರಮೇಶ್ವರಿ ಅಮ್ಮ. ೨೧.೧೨.೧೯೩೬ ರಲ್ಲಿ ಜನಿಸಿದ ಗೋಪಾಲಕೃಷ್ಣಶಾಸ್ತ್ರಿಯವರು ಪದವೀಧರ ಮುಖ್ಯೋಪಾಧ್ಯಾಯರಾಗಿ ೩೮ ವರ್ಷ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಶ್ರೀಯುತರ ಸೇವಾ ಕ್ಷೇತ್ರ ಶಿಕ್ಷಣವಾದರೆ, ಅಭಿರುಚಿಯ ಆದ್ಯಕ್ಷೇತ್ರ ಯಕ್ಷಗಾನ. ರಾಮ, ಕೃಷ್ಣ, ಲಕ್ಷಣ, ಅತಿಕಾಯ, ಇಂದ್ರಜಿತು ಮುಂತಾದ ಹಲವಾರು ಪುರುಷವೇಷಗಳನ್ನು; ಅಂಬೆ, ಮಂಡೋದರಿ, ಸೀತೆ, ಕೈಕೆ, ತಾರೆ ಮುಂತಾದ ಸ್ತ್ರೀವೇಷಗಳನ್ನು ಹಾಕಿ ರಂಗಸ್ಥಳದಲ್ಲಿ ಕುಣಿದಿರುವ ಇವರು ಯಕ್ಷಗಾನ ತಾಳಮದ್ದಳೆ ಸಂಘವನ್ನು ಸ್ಥಾಪಿಸಿದ್ದಾರೆ. ಸ್ವತಃ ಕಟ್ಟಡವಿರುವ ಈ ಸಂಘದಲ್ಲಿ ಹಿಮ್ಮೇಳ ಸಾಧನಗಳ ಸಂಗ್ರಹವಿದೆ, ನಾಟಕ ಪರಿಕರಗಳ ಸಂಗ್ರಹವಿದೆ.

ಅರ್ಥದಾರಿ ದಿಗ್ಗಜ ದಿ. ಶೇಣಿಗೋಪಾಲಕೃಷ್ಣ ಭಟ್ಟ, ನಾರಾಯಣ ಸಾಮಗ, ಕಾಂತರೈ ವಿದ್ವಾನ್, ಕೆರೆಮನೆ ಶಂಭುಹೆಗಡೆ ಮುಂತಾದವರೊಡನೆ ತಾಳಮದ್ದಳೆ ಕೂಟಗಳಲ್ಲಿ ಸಹಕಲಾವಿದರಾಗಿ ಅವರಿಂದ 'ಭೇಷ್' ಎನಿಸಿಕೊಂಡಿದ್ದಾರೆ.

ಹತ್ತಾರು ಕೃತಿಗಳನ್ನು ಬರೆದಿರುವ ಶ್ರೀಯುತರು "ಮಹಾಭಾರತ ಕೋಶ" ಎಂಬ ೬೨೦ ಪುಟಗಳ ಉದ್ಗ್ರಂಥವನ್ನು ಪ್ರಕಟಿಸಿರುವರು. ಕಲೆ ಸಾಹಿತ್ಯದ ಜೊತೆಗೆ ಯಕ್ಷಗಾನ ತಾಳಮದ್ದಳೆ ಅರ್ಥದಾರಿ ಯಾಗಿ ನಾಡಿನ ಉದ್ದಗಲಕ್ಕೂ ಸಂಚರಿಸಿರುವ ಶ್ರೀ ಸಿ. ಗೋಪಾಲಕೃಷ್ಣಶಾಸ್ತ್ರಿಗಳಿಗೆ ದೇಶಾದ್ಯಂತ ಗೌರವ ಸನ್ಮಾನಗಳು ಸಂದಿವೆ. ಪ್ರಸಕ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಶ್ರೀಯುತರನ್ನು ಗೌರವಿಸುವ ಮೂಲಕ ತನ್ನನ್ನೇ ತಾನು ಗೌರವಿಸಿಕೊಂಡಿದೆ.



ಶ್ರೀ ಎಸ್.ಬಿ. ಗುರಪ್ಪ

ಸುಗ್ಗಿ ಕುಣಿತ

ಸಿಂಗನಹಳ್ಳಿ ಗ್ರಾಮ
ತೋಳೋರು ಶೆಟ್ಟೆ
ಸೋಮವಾರ ಪೇಟೆ ತಾಲ್ಲೂಕು
ಕೊಡಗು

ನಮ್ಮ ನಾಡಿನ ಕೊಡಗು ತನ್ನ ಭೌಗೋಳಿಕ ಹಾಗೂ ಪ್ರಾಕೃತಿಕ ಸಿರಿಯಿಂದ ಎಲ್ಲರ ವಿಶೇಷವಾದ ಗಮನವನ್ನು ಸೆಳೆದಿದೆ. ಈ ಮಲೆನಾಡಿನ ಮಕ್ಕಳ ವಿಶಿಷ್ಟ ಉಡುಗೆತೊಡುಗೆ ಆಕರ್ಷಣೀಯ. ಇವರ ಸಾಂಸ್ಕೃತಿಕ ಜಗತ್ತು ರಂಜನೀಯ. ಅಂಥ ಸಾಂಸ್ಕೃತಿಕ ಸಂವೇದನೆಯನ್ನು ತನ್ನ ಸಮಕಾಲೀನ ಜನರಲ್ಲಿ ಹುಟ್ಟುಹಾಕಿ ಕೊಡಗಿನ ಜನಪದ ನೃತ್ಯವಾದ ಸುಗ್ಗಿ ಕುಣಿತವನ್ನು ಜೀವಂತವಾಗಿರಿಸಿಕೊಂಡು ಬಂದವರು ಶ್ರೀ ಎಸ್.ಬಿ. ಗುರಪ್ಪ. ಕೊಡಗಿನ ಸೋಮವಾರಪೇಟೆ ತಾಲ್ಲೂಕಿನ ಸಿಂಗನಹಳ್ಳಿ ಗ್ರಾಮದ ಇವರು ಬಾಲ್ಯದಲ್ಲಿಯೇ ಕೊಡಗಿನ ಜನಪದ ನೃತ್ಯಕ್ಕೆ ಮಾರುಹೋದವರು. ಅದಕ್ಕೆಂದೇ ಅನೇಕ ಕಲಾವಿದರ ಜೊತೆ ಸೇರಿ ಹಬ್ಬ, ಹುಣ್ಣಿಮೆ, ಜಾತ್ರೆ, ಉತ್ಸವಗಳಲ್ಲಿ ಕುಣಿದು ಕುಣಿತದ ಮೋಜನ್ನು ನೆರೆಯವರಿಗೆ ತೋರಿಸಿಕೊಟ್ಟರು.

ತಮ್ಮ ವಿಶೇಷವಾದ ವೇಶ ಭೂಷಣಗಳಿಂದ ಜನರನ್ನು ಆಕರ್ಷಿಸುವ ಈ ಕಲೆಯ ಉಳಿವಿಗಾಗಿ ಶ್ರೀಯುತರು ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ. ವಾರಕ್ಕೊಮ್ಮೆ ದೇವಸ್ಥಾನದ ಮುಂದೆ ೪೦-೫೦ ಜನ ಹಳ್ಳಿಯ ವಿದ್ಯಾವಂತ ಯುವಕರನ್ನು ಕಲೆಹಾಕಿ ಅವರಿಗೆ ಜನಪದ ನೃತ್ಯವನ್ನು ಕಲಿಸಿ ಕೊಟ್ಟಿದ್ದಾರೆ. ದೆಹಲಿ ಮುಂತಾದ ಹೊರನಾಡುಗಳಲ್ಲಿ ಇವರ ತಂಡ ಪ್ರದರ್ಶನ ನೀಡಿದೆ. ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡ ಇವರ ತಂಡಕ್ಕೆ ಅನೇಕ ಪುರಸ್ಕಾರಗಳು ಸಂದಿವೆ. ಪ್ರಸ್ತುತ, ಶ್ರೀ ಗುರಪ್ಪನವರಿಗೆ ಅವರ ಕಲಾಕೌಶಲ್ಯವನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀ ಅಸಾದಿ ಕರಿಯಪ್ಪ

ಅಸಾದಿ

ನಂದೀಪುರ ಗಡೀಹಳ್ಳಿ ಅಂಚೆ
ತರೀಕೆರೆ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ,

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ನಂದಿಪುರ ಗ್ರಾಮವಾಸಿ ಶ್ರೀ ಅಸಾದಿ ಕರಿಯಪ್ಪನವರು ಅಸಾದಿ ಕಲೆಯ ಅಪ್ರತಿಮ ಕಲಾವಿದ. ವಂಶಪಾರಂಪರ್ಯವಾಗಿ ಬಂದ ಈ ಕಲೆಯನ್ನು ಕರಿಯಪ್ಪ ತಮ್ಮ ತಂದೆಯವರಿಂದ ಕಲಿತರು. ತಮ್ಮ ಗ್ರಾಮದ ಸುತ್ತಮುತ್ತಲಿನ ಹಳ್ಳಿಗಳ ಹಬ್ಬ ಜಾತ್ರೆಗಳಲ್ಲಿ ಶ್ರೀಯುತರು ಅಸಾದಿ ಕಲೆಯನ್ನು ಪ್ರದರ್ಶಿಸುತ್ತ ಜನಮನವನ್ನು ಗೆದ್ದಿದ್ದಾರೆ. ವಿಶೇಷವಾಗಿ ಶ್ರೀ ಅಂತರಗಟ್ಟಮ್ಮ ದೇವತೆಯ ಹೊಗಳಿಕೆಯನ್ನು ಹರಕೆಯೋಪಾದಿ ಯಲ್ಲಿ ತೀರಿಸುತ್ತ ಬಂದಿರುವ ಕರಿಯಪ್ಪ ಅನೇಕ ಶಿಷ್ಯರನ್ನು ಪಡೆದಿದ್ದಾರೆ. ಅವರ ಭೌಗೋಳಿಕ ಪರಿಸರದ ಅನೇಕ ಗಂಡು ದೇವರುಗಳನ್ನು ತಮ್ಮ ಅಸಾದಿ ಪದ ವೈವಿಧ್ಯದಿಂದ ಕಟ್ಟಿಹಾಕುತ್ತಾರೆ. ಇವರಿಲ್ಲದೆ ದೇವರುಗಳು ಹೊರಡುವುದೇ ಇಲ್ಲ ಅಷ್ಟರಮಟ್ಟಿಗೆ ಇವರಿಗೆ ಗ್ರಾಮದೇವತೆಗಳ ಸಂಬಂಧ.

ಸುಮಾರು ೮೦ ವರ್ಷ ವಯಸ್ಸಿನ ಕರಿಯಪ್ಪನವರು ಆಕಾಶವಾಣಿ ಕಲಾವಿದರೂ ಹೌದು. ಇಂದಿಗೂ ಅಸಾದಿ ಕಲೆಯನ್ನು ಹುರುಪು ಹುಮ್ಮಸ್ಸಿನಿಂದ ನಡೆಸಿಕೊಡುವ ಇವರಿಗೆ ಅನೇಕ ಸನ್ಮಾನಗಳು ಸಂದಿವೆ. ಪ್ರಸಕ್ತ ೨೦೦೭ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಅಸಾದಿ ಕರಿಯಪ್ಪ ನವರ ಮುಡಿಯೇರಿ ಅವರ ಕಲಾಗೌರವವನ್ನು ಹೆಚ್ಚಿಸಿದೆ.

ಶ್ರೀ ಲಕ್ಷ್ಮಯ್ಯ

ತಂಬೂರಿ ಪದ

ಕಬ್ಬಳಿ ಗ್ರಾಮ
ಹಳೆ ಕೊಪ್ಪಲು ಅಂಚೆ
ದುದ್ದ ಹೋಬಳಿ
ಹಾಸನ ತಾಲ್ಲೂಕು.

ತಂಬೂರಿ ಪದ ನುಡಿಸುತ್ತ ಅನೇಕ ಖಂಡಕಾವ್ಯಗಳನ್ನು ಹಾಡುವ ಲಕ್ಷ್ಮಯ್ಯನವರಿಗೆ ಈಗ ೬೬ ವರ್ಷ ವಯಸ್ಸು. ತಂದೆ ಸಣ್ಣ ಕರಿಯಯ್ಯ, ತಾಯಿ ಹೊನ್ನಮ್ಮ. ಹಾಸನ ತಾಲ್ಲೂಕಿನ ದುದ್ದ ಹೋಬಳಿಯ ಕಬ್ಬಳಿ ಗ್ರಾಮದ ಇವರು ಚಿಕ್ಕಂದಿನಿಂದಲೇ ತಂಬೂರಿಯ ಹಿಮ್ಮೇಳ ಕಲಾವಿದರಾಗಿ ಊರೂರು ಸುತ್ತುತ್ತಾ ಮುಮ್ಮೇಳದ ಗಾಯಕ ನಾಯಕರಾಗಿ ಬೆಳೆದರು. ಇವರ ಕಂಠಮಾಧುರ್ಯ ಹಾಗೂ ತಂಬೂರಿ ಮೀಟುವ ಚಮತ್ಕಾರಿಕೆಗೆ ಮರುಳಾಗದವರೇ ಇಲ್ಲ. ಅಷ್ಟರಮಟ್ಟಿಗೆ ಶ್ರೀಯುತರು ನುರಿತ ಕಲಾವಿದರಾಗಿ 'ಭೇಷ್' ಎನ್ನಿಸಿಕೊಂಡಿದ್ದಾರೆ.

ಕೊಡಗಿನ ನಿಂಗರಾಜಮ್ಮನ ಕತೆ, ಬಂಜೆ ಹೊನ್ನಮ್ಮನ ಕತೆ, ಮೂಡ್ಲಿಗಿರಿ ತಿಮ್ಮಪ್ಪನ ಕತೆ, ಎಲ್ಲಮ್ಮನ ಕತೆ, ರುದ್ರಕುಮಾರ, ಬಾಲನಾಗಮ್ಮ ಮುಂತಾದ ಕಥನ ಕಾವ್ಯಗಳನ್ನು ನಿರರ್ಗಳವಾಗಿ ಹಾಡುವ ಲಕ್ಷ್ಮಯ್ಯ ಬೆಳಿಗ್ಗೆ ಕುಳಿತರೆ ರಾತ್ರಿಯಾಗುವಷ್ಟು, ರಾತ್ರಿ ಕುಳಿತರೆ ಬೆಳಗಾಗುವಷ್ಟು ಕತೆಗಳನ್ನು ಹಾಡಬಲ್ಲರು. ತಮ್ಮ ತಂಬೂರಿಯ ಗುರು, ಕಬ್ಬಳಿಯ ತಂಬೂರಿ ದಾಸಪ್ಪನವರನ್ನು ನೆನೆದುಕೊಂಡು ಕತೆ ಆರಂಭಿಸಿದರೆ ತನ್ಮಯರಾಗಿ ಹಾಡುತ್ತಾ ಹೋಗುವ ಇವರ ಕಲಾವಂತಿಕೆಗೆ ಆ ಭಾಗದ ಜನ ಮರುಳಾ□ಗದವರೇ ಇಲ್ಲ.

ತಮಟೆ, ಹರೆಗಳನ್ನು ಬಾರಿಸಬಲ್ಲ ಇವರು ತಂಬೂರಿ ಸಂಪ್ರದಾಯವನ್ನೇ ಪ್ರವೃತ್ತಿಯಾಗಿಸಿಕೊಂಡು, ಬೇಸಾಯವಿಲ್ಲದ ದಿನಗಳಲ್ಲಿ ಊರೂರು ತಿರುಗಿ ಕತೆ ಮಾಡುತ್ತಾರೆ. ಇವರ ಕತಾ ಕೌಶಲ್ಯವನ್ನು ಮೆಚ್ಚಿ ಅನೇಕ ಕಡೆ ಲಕ್ಷ್ಮಯ್ಯನವರನ್ನು ಸನ್ಮಾನಿಸಿದ್ದಾರೆ. ಪ್ರಸಕ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಇವರನ್ನು ಪುರಸ್ಕರಿಸಿದೆ.



ಶ್ರೀ ನಾರಾಯಣ ಗಾಣಿಗ

ಯಕ್ಷಗಾನ

ವಂಡ್ಸೆ ಅಂಚೆ
ಕುಂದಾಪುರ ತಾಲ್ಲೂಕು
ಉಡುಪಿ ಜಿಲ್ಲೆ - ೫೭೬೨೩೩

ಕುಂದಾಪುರ ತಾಲ್ಲೂಕು, ವಂಡ್ಸೆ ಶೇಶಗಾಣಿಗ ಮತ್ತು ಪಣಿಯಮ್ಮನವರ ಪುತ್ರರಾಗಿ ಜನಿಸಿದ ಶ್ರೀ ನಾರಾಯಣ ಗಾಣಿಗರು ತಮ್ಮ ಹನ್ನೊಂದನೇ ವಯಸ್ಸಿನಲ್ಲಿ ಯಕ್ಷಗಾನ ಕಲಾ ಪ್ರಪಂಚಕ್ಕೆ ಕಾಲಿಟ್ಟರು. ಅಂದಿನಿಂದ ಅವರು ನಿರಂತರವಾಗಿ ಈ ಕಲೆಯಲ್ಲಿ ತೊಡಗಿಕೊಂಡು ಕಲಾ ವೈಭವವನ್ನು ಮೆರೆಸಿದ್ದಾರೆ. ತಮ್ಮ ಭಾಗದ ಅನೇಕ ಯಕ್ಷಗಾನ ಮೇಳಗಳಲ್ಲಿ ವಿಭಿನ್ನ ರೀತಿಯ ಪಾತ್ರಗಳನ್ನು ಮಾಡಿದ್ದಾರೆ. ಮಾರಣಕಟ್ಟೆ ಮೇಳದಲ್ಲಿ ಪ್ರಥಮವಾಗಿ ಗೆಜ್ಜೆಕಟ್ಟಿದ ಇವರು ಗುರು ವೀರಭದ್ರಾನಾಯಕರಿಂದ ದೀಕ್ಷೆ ಪಡೆದು ಅನೇಕ ಸ್ತ್ರೀಪಾತ್ರಗಳನ್ನು ಮಾಡಿದ್ದಾರೆ. ಉದಾ. : ಚಿತ್ರಾಂಗದೆ, ದೇವಯಾನಿ, ಪ್ರಮಿಳೆ, ರೂಪರೇಖಾ, ಮೇನಕಾ, ದಮಯಂತಿ ಇತ್ಯಾದಿ.

ನಾಡಿನ ಖ್ಯಾತನಾಮರೂ ಪ್ರಸಕ್ತ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಕೆರೆಮನೆ ಶಂಭುಹೆಗಡೆಯವರ ಜೊತೆ ಯಕ್ಷಗಾನ ತಿರುಗಾಟ ಮಾಡಿರುವ ನಾರಾಯಣ ಗಾಣಿಗರು ಸುಮಾರು ೪೦ ವರ್ಷಕಾಲ ಮಂದಾರ್ತಿ, ಧರ್ಮಸ್ಥಳ, ಕೂಡ್ಲು, ಇಡಗುಂಜಿ ಹಾಗೂ ಡಾ. ಶಿವರಾಮ ಕಾರಾಂತರ ಯಕ್ಷರಂಗ - ಮುಂತಾದ ಮೇಳಗಳಲ್ಲಿ ಅಭಿನಯಿಸಿದ್ದಾರೆ.

ನೃತ್ಯ, ಅಭಿನಯ, ವೇಷಗಾರಿಕೆ, ಭಾಗವತಿಕೆ, ಚಂಡೆ-ಮದ್ದಳೆಗಳಲ್ಲಿ ಪರಿಣತಿ ಪಡೆದಿರುವ ಶ್ರೀಯುತರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಸ್ತುತ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.



ಶ್ರೀ ಹಾಲಗೂಡಯ್ಯ

ನೀಲಗಾರರು

ಚೆಲುವ ಮನಿಯಯ್ಯನವರ ಮಗ
ಹೊಂಗನೂರು ಗ್ರಾಮ
ಮತ್ತು ಅಂಚೆ
ಚಾಮರಾಜನಗರ ತಾಲ್ಲೂಕು.

ಹೊಂಗನೂರು ಗ್ರಾಮದ ದಿವಂಗತ ಚೆಲುವ ಮನಿಯಯ್ಯ ಮತ್ತು ದಿವಂಗತ ನಿಂಗಮ್ಮ ಅವರ ಎರಡನೇ ಮಗನಾಗಿ ಜನಿಸಿದ ಹಾಲಗೂಡಯ್ಯನವರಿಗೆ ಈಗ ೭೦ ವರ್ಷ. ಹುಟ್ಟು ಕಲಾವಿದರಾದ ಇವರು ಎಂಟನೇ ವಯಸ್ಸಿಗೆ ಮಲೆಮಹದೇಶ್ವರ ಸ್ವಾಮಿಯ ಗುಡ್ಡರಾಗಿ ದೀಕ್ಷೆ ಪಡೆದವರು. ದಿವಂಗತ ಮಿಷಿನ್ ಬಸವಯ್ಯ, ಸಾಲೂರುಮಠದ ಮಹದೇವ ಸ್ವಾಮಿಗಳು ಮತ್ತು ದಾಸನಂಜಯ್ಯ ಅವರುಗಳಿಂದ ವಿದ್ಯೆ ಪಡೆದು ಕೈಯಲ್ಲಿ ತಂಬೂರಿ ಹಿಡಿದು ಹಾಡು ಹಾಡುತ್ತಲೇ ಬದುಕು ಸವೆಸಿದ ನೀಲಗಾರ ಕಲಾವಿದರು ಇವರು.

ಮಲೆಮಹದೇಶ್ವರ, ಮಂಟೇಸ್ವಾಮಿ, ಶನಿಮಹಾತ್ಮೆ, ಬಾಲನಾಗಮ್ಮ ಬಿಳಿಗಿರಿರಂಗಸ್ವಾಮಿ ಮೊದಲಾದ ಕಥನ ಕಾವ್ಯಗಳನ್ನು ಹಾಡುತ್ತಾ ಹಳ್ಳಿ ಹಳ್ಳಿಗಳನ್ನು ತಿರುಗಿದ್ದಾರೆ. ಅನೇಕ ಶಿಷ್ಯ ವೃಂದಕ್ಕೆ ನೀಲಗಾರರ ಪದಗಳನ್ನು ಕಲಿಸಿಕೊಡುವುದರ ಮೂಲಕ ಗುರು ಕೊಟ್ಟ ವಿದ್ಯೆಯನ್ನು ಧಾರೆ ಎರೆದಿದ್ದಾರೆ. ಬಡತನವೇ ಮೈವೆತ್ತಿ ನಿಂತಿರುವ ನೀಲಗಾರರ ಬದುಕು ಇಂದಿಗೂ ಶೋಚನೀಯ ಸ್ಥಿತಿಯಲ್ಲಿದೆ. ಹಾಲಗೂಡಯ್ಯ ಅವರ ಬದುಕು ಇದಕ್ಕೆ ಹೊರತಾಗಿಲ್ಲ. ನಾಲ್ಕು ಮಕ್ಕಳೊಂದಿಗೆ, ಹೆಂಡತಿ ರಂಗಮ್ಮನವರ ಜೊತೆಗೆ ಹೊಂಗನೂರಿನಲ್ಲಿ ವಾಸಿಸುತ್ತಿರುವ ಇವರಿಗೆ ಭಿಕ್ಷಾವೃತ್ತಿಯೇ ಬದುಕಾಗಿದೆ.

ನೀಲಗಾರ ಪರಂಪರೆ ಮುಂದಿನ ತಲೆಮಾರಿಗೆ ಕೊಂಡಿಯಾಗುವಂತೆ ಈ ಕಲೆಯನ್ನು ಬೆಳೆಸುವ ಕಾಯಕದಲ್ಲಿ ತೊಡಗಿರುವ ಹಾಲಗೂಡಯ್ಯ ಅವರಿಗೆ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರೆತಿರುವುದು ಚಾಮರಾಜನಗರ ಜಿಲ್ಲೆಯ ನೀಲಗಾರ ಸಂಪ್ರದಾಯಕ್ಕೆ ಸಂದ ಗೌರವವಾಗಿದೆ.

ಶ್ರೀ ಗಿರೆಪ್ಪಾ ರಾಮಪ್ಪಾ
ಇರಕಿನಕೊಪ್ಪ

ಕರಡಿ ಮಜಲು

ಕೆ.ಬಿ. ಗಿರಿಯಾಲ
ಬೈಲಹೊಂಗಲ
ಬೆಳಗಾವಿ.

ಗುರು ನಾಗಪ್ಪಾನಿಂಗಪ್ಪಾ ಆರೇರ ಅವರ ಕೈಯಿಂದ ಕರಡಿ ಮಜಲು ಕಲೆಯ ದೀಕ್ಷೆ ಪಡೆದ ಕಲಾವಿದ ಶ್ರೀ ಗಿರೆಪ್ಪಾ ರಾಮಪ್ಪಾ ಇರಕಿನಕೊಪ್ಪ ಅವರು ಬೆಳಗಾವಿ ಜಿಲ್ಲೆಯ ಬೈಲುಹೊಂಗಲ ತಾಲ್ಲೂಕಿನ ಕೆ.ಬಿ. ಗಿರಿಯಾಲದವರು. ಗುರು ನೀಡಿದ ಕಲಾ ಜಗತ್ತನ್ನು ವಿಸ್ತರಿಸುವ ಕಾಯಕವನ್ನು ಕಳೆದ ನಲವತ್ತು ವರ್ಷಗಳಿಂದ ನಡೆಸುತ್ತಾ ಬಂದಿದ್ದಾರೆ. ಸುಮಾರು ೪೦ ವರ್ಷಗಳ ಕಾಲ ಶ್ರೀಯುತರು ರಾಜ್ಯದ ನಾನಾ ಕಡೆ ಕರಡಿ ಮಜಲು ಕಾರ್ಯಕ್ರಮವನ್ನು ನೀಡಿ ಅಪಾರ ಜನಮನ್ನಣೆಯನ್ನು ಪಡೆದಿದ್ದಾರೆ. ಹಲಗೆ ವಾದನ, ಕರಡಿ ವಾದನ, ಕೈತಾಳು, ದಿಮ್ಮು ಮತ್ತು ವಾದ್ಯಗಳನ್ನೂ ನುಡಿಸುವ ಇವರು ಅನೇಕ ಶಿಷ್ಯರಿಗೆ ಇವನ್ನೆಲ್ಲಾ ಹೇಳಿಕೊಟ್ಟಿದ್ದಾರೆ.

ಖಾನಾಪುರ, ಬೆಳಗಾವಿ, ಬೈಲಹೊಂಗಲ, ಹುಕ್ಕೇರಿ ತಾಲ್ಲೂಕುಗಳಲ್ಲಿಯೂ, ಧಾರವಾಡ ಜಿಲ್ಲೆಯಲ್ಲಿಯೂ ಶಿಷ್ಯರನ್ನು ಪಡೆದಿರುವ ಗಿರೆಪ್ಪಾ ರಾಮಪ್ಪಾ ಇರಕಿನಕೊಪ್ಪ ಅವರಿಗೆ ೫೦ ತಂಡಗಳನ್ನು ಬೆಳೆಸಿದ ಹೆಮ್ಮೆ. ತಾನೂ ಬೆಳೆಯುತ್ತ ತನ್ನೊಂದಿಗೆ ಇತರರನ್ನು ಬೆಳೆಸುವವನೇ ನಿಜವಾದ ಕಲಾವಿದ. ಅಂಥ ಅಪರೂಪದ ಈ ವೃತ್ತಿ ಕಲಾವಿದರಿಗೆ ನಾಡಿನ ಜನತೆ ಸೂಕ್ತ ರೀತಿಯಲ್ಲಿ ಗೌರವಿಸಿದೆ. ಈಗ ಶ್ರೀಯುತರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.



ಶ್ರೀ ದೇವರಾಯ ಅಣ್ಣಪ್ಪ ರೈ

ಯಕ್ಷಗಾನ

ದೇವಕೃಪಾ, ಪುರವರ್ಗ
ಭಟ್ಕಳ

ತಮ್ಮ ೮ನೇ ವಯಸ್ಸಿನಲ್ಲಿ ಯಕ್ಷಗಾನ ರಂಗ ಪ್ರವೇಶ ಮಾಡಿದ ದೇವರಾಯ ಪೈ ಅವರು ಆ ಕ್ಷೇತ್ರದ ಬಹು ದೊಡ್ಡ ಹೆಸರು. ತಮ್ಮ ತಂದೆ ಅಣ್ಣಪ್ಪ ಪೈಯವರಿಂದಲೇ ಯಕ್ಷಗಾನ ದೀಕ್ಷೆ ಪಡೆದ ಶ್ರೀಯುತರು ಯಕ್ಷಗಾನದ ಮುಮ್ಮೇಳ ಹಾಗೂ ಹಿಮ್ಮೇಳ ಎರಡರಲ್ಲೂ ತಮ್ಮದೇ ಆದ ವೈಶಿಷ್ಟ್ಯದೊಂದಿಗೆ ಪಾತ್ರ ನಿರ್ವಹಿಸುತ್ತಾ ಬಂದಿದ್ದಾರೆ.

ಭಟ್ಕಳ ಮೇಳದಲ್ಲಿ ಕೃಷ್ಣ, ಹನುಮಂತ, ಅರ್ಜುನ, ಮಧು ಮುಂತಾದ ಮುಖ್ಯ ಪಾತ್ರಗಳನ್ನು ನಿರ್ವಹಿಸಿರುವ ಪೈಗಳು ಅತಿಥಿ ಕಲಾವಿದರಾಗಿ ಬೇರೆ ಬೇರೆ ಮೇಳಗಳಲ್ಲಿ ಭೀಮ, ಹಿಡಂಬಿ, ಈಶ್ವರ, ಸುಧನ್ವನ ಪಾತ್ರಗಳನ್ನು ಮಾಡಿದ್ದಾರೆ.

ಶ್ರೀಯುತರು ಕೇವಲ ಯಕ್ಷಗಾನ ಕಲಾವಿದರಷ್ಟೇ ಅಲ್ಲದೆ ಯಕ್ಷಗಾನ ಪ್ರಸಂಗ ಕರ್ತರೂ ಆಗಿ ಖ್ಯಾತರಾಗಿದ್ದಾರೆ. ಮಣಿಕಂಠ ವಿಜಯ, ನಾಗಮಂಡಲ, ಗಣೇಶ ಮಹಾತ್ಮೆ, ತ್ರಿಭುವನ ಮಲ್ಲ, ಶೇಷಾಚಲ ಮಹಾತ್ಮೆ, ದೇವಿ ಮಹಾತ್ಮೆ, ರುಂಢ ಭೈರವ ಕಾಳಗ, ಸೋಡಿಗದ್ದೆ ಕ್ಷೇತ್ರ ಮಹಾತ್ಮೆ ಮುಂತಾದವು ಇವರ ಪ್ರಸಂಗ ರಚನೆಗಳು.

ಮಕ್ಕಳ ಜಾನಪದ ಯಕ್ಷಗಾನ ಕಲಾಕೇಂದ್ರವನ್ನು ಸ್ಥಾಪಿಸಿರುವ ಶ್ರೀಯುತರಿಗೆ ಅನೇಕಾನೇಕ ಸನ್ಮಾನಗಳು ಸಂದಿವೆ. ಸುಮಾರು ೮೦ ವರ್ಷ ವಯಸ್ಸಿನಲ್ಲೂ ಯಕ್ಷಗಾನ ರಂಗವನ್ನು ಏರೆತ್ತರಕ್ಕೇರಿಸುವ ಹೆಬ್ಬಯಕೆಯೊಂದಿಗೆ ಎಳೆಯರಂತೆ ದಣಿವರಿಯದೇ ದುಡಿವ ಈ ಕಲೋಪಾಸಕರಿಗೆ ಇದೋ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಶ್ರೀ ವೀರಪಣ್ಣ
ಕಲ್ಲಪ್ಪ ಕುಂದಗೋಳ

ಬಯಲಾಟ

ಸುಳ್ಳ ಅಂಚೆ
ಹುಬ್ಬಳ್ಳಿ ತಾಲ್ಲೂಕು
ಧಾರವಾಡ ಜಿಲ್ಲೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಸುಳ್ಳ ಗ್ರಾಮವಾಸಿ ಶ್ರೀ ವೀರಪಣ್ಣ ಕಲ್ಲಪ್ಪ ಕುಂದಗೋಳ ಇವರು ಕಲಿತದ್ದು ನಾಲ್ಕನೆಯ ಇಯತ್ತೆ. ಬಾಲ್ಯದಲ್ಲಿಯೇ ತಮ್ಮ ಗ್ರಾಮದಲ್ಲಿ ನಡೆಯುತ್ತಿದ್ದ ಭಜನೆ, ಹೆಜ್ಜೆ ಕೋಲಾಟ, ದೊಡ್ಡಾಟ, ಸಣ್ಣಾಟ, ಮುಳ್ಳಿನ ಹೆಜ್ಜೆ, ಜಗ್ಗಲಿಗೆ ಮುಂತಾದ ಕಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸುಮಾರು ೪೦ ವರ್ಷಗಳ ಕಾಲ ಈ ಕಲೆಗಾಗಿ ದುಡಿದಿದ್ದಾರೆ. ವಿಶೇಷವಾಗಿ ದೊಡ್ಡಾಟ ಕಲೆಯಲ್ಲಿ ಪರಿಣತಿ ಪಡೆದರೂ, ನಟ ಸಾರ್ವಭೌಮ ಡಾ. ರಾಜಕುಮಾರ್ ಹಾಗೂ ಚಿತ್ರನಟ ಅಂಬರೀಶ್ ಅವರೊಂದಿಗೆ ಜಗ್ಗಲಿಗೆ ಸೇವೆ ಮಾಡಿ 'ಭೇಷ್' ಎನ್ನಿಸಿಕೊಂಡಿದ್ದಾರೆ.

ಆಕಾಶವಾಣಿ ಧಾರವಾಡ ಹಾಗೂ ದೂರದರ್ಶನ ಕೇಂದ್ರ ಬೆಂಗಳೂರು - ಮಾಧ್ಯಮಗಳ ಕಲಾವಿದರಾಗಿ ಗುರುತಿಸಿಕೊಂಡಿರುವ ಶ್ರೀಯುತರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕಲಾಪ್ರದರ್ಶನ ಮಾಡಿ, ಅನೇಕಾನೇಕ ಗೌರವಗಳನ್ನು ಪಡೆದಿದ್ದಾರೆ. ವೃತ್ತಿಯಲ್ಲಿ ರೈತರಾಗಿ ಪ್ರವೃತ್ತಿಯಲ್ಲಿ ಕಲಾವಿದರಾಗಿರುವ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಸಕ್ತ ಸಾಲಿನ ಪ್ರಶಸ್ತಿ ನೀಡಿ ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆ.

ಶ್ರೀ ಹನುಮಂತಪ್ಪ
ಗೋವಿಂದಪ್ಪ ಹೂಗಾರ

ಸಂಪ್ರದಾನಿ ವಾದನ

ಹಂಡರಗಲ್ಲ
ಮುದ್ದೆಬಿಹಾಳ ತಾಲ್ಲೂಕು
ಬಿಜಾಪುರ ಜಿಲ್ಲೆ - ೫೮೬೧೨೯

ಸಾಂಪ್ರದಾಯಿಕ ಸಂಬಾಳವಾದನ, ಸಂಪ್ರದಾಯಿನಿ ವಾದನ ಹಾಗೂ ಕರಡಿ ಮಜಲು ವಾದನಗಳನ್ನು
ಮೈಗೂಡಿಸಿಕೊಂಡು ಅವುಗಳ ಸೇವೆ ಮಾಡುತ್ತ, ತಂದೆಯವರ ಆಶೀರ್ವಾದದಿಂದ ಸಾಧನೆಗೆ ತಕ್ಕ
ಗೌರವವನ್ನು ಗಳಿಸಿಕೊಂಡು ನಡೆದಿರುವ ಶ್ರೀ ಹನುಮಂತಪ್ಪ ಗೋವಿಂದಪ್ಪ ಹೂಗಾರ ಅವರು
ವಿಜಾಪುರ ಜಿಲ್ಲೆಯ, ಮುದ್ದೇಬಿಹಾಳ ತಾಲ್ಲೂಕಿನ ಹಂಡರಗಲ್ಲ ಗ್ರಾಮದವರು. ಪ್ರತಿ ಹಳ್ಳಿ ತಾಲ್ಲೂಕಿನ
ಜನರ ಪ್ರೀತಿಯನ್ನು ಗಳಿಸಿಕೊಂಡು ಕಲಾಸೇವೆಯನ್ನು ಮಾಡುತ್ತಾ ಬಂದಿರುವ ಇವರಿಗೆ ಈಗ ಸುಮಾರು
೬೭ ವರ್ಷ ವಯಸ್ಸು. ಶ್ರೀ ಮಲ್ಲಪ್ಪ ಶಿದ್ರಾಮಪ್ಪ ಹೂಗಾರ ಇವರ ಗುರು. "ಗುರು ಕಾರಣ್ಯದಿಂದ
ನಾನು ಇಂದು ರಾಷ್ಟ್ರಮಟ್ಟದ ಕಲಾವಿದನಾದೆ" ಎನ್ನುವ ಹನುಮಂತಪ್ಪ ನಾಡಿನ ಶ್ರೇಷ್ಠ ಕಲಾವಿದರಲ್ಲಿ
ಒಬ್ಬರಾಗಿದ್ದಾರೆ.

ಸುಮಾರು ೩೦-೪೦ ವರ್ಷಗಳಿಂದ ಅನೇಕ ಪ್ರಮುಖ ವೇದಿಕೆಗಳಲ್ಲಿ ಕಲಾ ಪ್ರದರ್ಶನ ಮಾಡಿರುವ
ಶ್ರೀಯುತರು ಬಹಳಷ್ಟು ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಗಿಟ್ಟಿಸಿದ್ದಾರೆ. ವಾರ್ತಾ
ಮತ್ತು ಪ್ರಚಾರ ಇಲಾಖೆ, ಗ್ರಾಮೀಣ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಲ್ಲದೆ; ಹಂಪಿ ಉತ್ಸವ,
ಪಟ್ಟದ ಕಲ್ಲು ಉತ್ಸವ, ಮತ್ತು ಬೆಂಗಳೂರು ಜಾನಪದ ಹಬ್ಬಗಳಲ್ಲಿ ಕಲಾ ಪ್ರದರ್ಶನ ನೀಡಿ ಅಪಾರ
ಗೌರವ ಹಾಗೂ ಸನ್ಮಾನಗಳನ್ನು ಪಡೆದಿರುವರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಅವರ ಕಲಾ ಕೌಶಲ್ಯವನ್ನು ಮೆಚ್ಚಿ ಪ್ರಸಕ್ತ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.



ಶ್ರೀ ಅಡಿವೆಪ್ಪ
ಸಣ್ಣಬೀರಪ್ಪ ಕುರಿಯವರ

ತತ್ತ್ವಪದ

ಮೋಟೆ ಬೆನ್ನೂರು ಅಂಚೆ
ಬ್ಯಾಡಗಿ ತಾಲ್ಲೂಕು
ಹಾವೇರಿ ಜಿಲ್ಲೆ.

ತತ್ತ್ವಪದ ಹಾಡುತ್ತ ನಾಡಜನತೆಯನ್ನು ರಂಜಿಸುವ ಮೂಲಕ ಜೀವನ ಮೌಲ್ಯವನ್ನು ಹೆಚ್ಚಿಸುವ ಜವಾಬ್ದಾರಿಯುತ ಕಾಯಕ ಮಾಡುತ್ತ, ಕೃಷಿ ಜೀವನ ನಡೆಸುತ್ತಿರುವ ಶ್ರೀ ಅಡಿವೆಪ್ಪ ಸಣ್ಣ ಬೀರಪ್ಪ ಕುರಿಯವರ ಮೋಟೆ ಬೆನ್ನೂರಿನವರು. ತಂದೆ ಸಣ್ಣ ಬೀರಪ್ಪ, ತಾಯಿ ಗಂಗಮ್ಮ. ೧.೩.೧೯೪೭ರಲ್ಲಿ ಜನಿಸಿದ ಇವರು ತಮ್ಮ ತಂದೆಯಿಂದ ದೊಡ್ಡಾಟದ ದೀಕ್ಷೆ ಪಡೆದರು. ಬಾಲ್ಯದಲ್ಲಿ ಊರಿನ ಭಜನಾ ಮೇಳದವರ ಜೊತೆಗೂಡಿ ತತ್ವಪದಗಳನ್ನು ಕಲಿತುಕೊಂಡರು. ರೈಲ್ವೆ ಇಲಾಖೆಯಲ್ಲಿ ನಾಲ್ಕನೇ ದರ್ಜೆಯ ನೌಕರಿ ಪಡೆದು ಸುಮಾರು ೩೫ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿರುವರು.

ತತ್ತ್ವಪದಗಳನ್ನು ತಮ್ಮದೇ ಆದ ರೀತಿಯಲ್ಲಿ ಹಾಡುತ್ತಾ ಊರೂರು ತಿರುಗುವ ಇವರು ಹವ್ಯಾಸಿ ರಂಗ ಕಲಾವಿದರಾಗಿಯೂ ಹೆಸರು ಮಾಡಿದ್ದಾರೆ. ಸುಮಾರು ೩೦ ವರ್ಷಕಾಲ ಈ ಕಾಯಕವನ್ನು ನಿಷ್ಠೆಯಿಂದ ಮಾಡಿಕೊಂಡು ಬಂದಿರುವ ಶ್ರೀ ಅಡಿವೆಪ್ಪ ಅವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆಯ ವತಿಯಿಂದ ಶಾರದಾ ಶಾಲ್ಮಲಾ ಪ್ರಶಸ್ತಿಯಲ್ಲದೆ ೨೦೦೭ರಲ್ಲಿ ಪಂಡಿತ ಬಸವರಾಜ ಮನ್ಸೂರ್ ರಾಜ್ಯಮಟ್ಟದ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಈಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಶ್ರೀಯುತರಿಗೆ ಈ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಶ್ರೀ ಸಿದ್ದಪ್ಪ ಶಿವಪ್ಪ ಭಜಂತ್ರಿ

ಮದ್ದಳೆ ಕಲಾ ಸೇವೆಯನ್ನು ಮಾಡುತ್ತಾ ಬಂದಿರುವ ಶ್ರೀ ಸಿದ್ದಪ್ಪ ಶಿವಪ್ಪ ಭಜಂತ್ರಿಯವರು ಗದಗ ಜಿಲ್ಲೆಯ ಸಾಕಿನದವರು. ಮದ್ದಳೆ ಕಲೆ ಇವರಿಗೆ ವಂಶಪಾರಂಪರ್ಯವಾಗಿ ಬೆಳೆದು ಬಂದದ್ದು. ಬಾಲ್ಯದಲ್ಲಿಯೇ ತಂದೆಯಿಂದ ಮದ್ದಳೆ ಕಲೆಯನ್ನು, ಒಡನಾಡಿಗಳಿಂದ ದೊಡ್ಡಾಟ-ಸಣ್ಣಾಟಗಳನ್ನು ಕಲಿತುಕೊಂಡ ಸಿದ್ದಪ್ಪ ಭಜಂತ್ರಿ ತಮ್ಮ ಕುಲಕಸುಬಾದ ಮದ್ದಳೆ ವಾದನವನ್ನೇ ವಿಶೇಷವಾಗಿ ನುಡಿಸುತ್ತಾ ಜನಮನವನ್ನು ಗೆದ್ದರು.

ನಾಡಿನ ಬಹುಭಾಗಗಳಲ್ಲಿ ಇವರ ಮದ್ದಳೆ ವಾದನ ಕಾರ್ಯಕ್ರಮ ನಡೆದಿದೆ. ಕಲಬುರ್ಗಿಯ ಶ್ರೀ ಶರಣ ಬಸವೇಶ್ವರ ಕ್ಷೇತ್ರದಲ್ಲಿ ಪ್ರತಿವರ್ಷ ನಡೆಯುವ ಪುರಾಣ ಪ್ರವಚನದ ಸಂದರ್ಭದಲ್ಲಿ ಸಿದ್ದಪ್ಪ ಭಜಂತ್ರಿಯವರ ಮದ್ದಳೆ ವಾದನ ಇದ್ದೇ ಇರಬೇಕು. ಉತ್ತರ ಕರ್ನಾಟಕದ ಮಠಗಳಲ್ಲಿ ನಡೆಯುವ ಪ್ರವಚನ, ದೇವತಾ ಕಾರ್ಯಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಜಂತ್ರಿಯವರ ಮದ್ದಳೆವಾದನ ಸೇವೆ ಕಡ್ಡಾಯವಾಗಿ ಇರುತ್ತದೆ. ಹೀಗೆ ಒಂದು ಪ್ರದೇಶದ ಬಹು ಜನಮಾನ್ಯ ಕಲಾವಿದರಾಗಿ ಜೀವನ ನಡೆಸಿಕೊಂಡು ಬಂದಿರುವ ಸಿದ್ದಪ್ಪ ಶಿವಪ್ಪ ಭಜಂತ್ರಿಯವರಿಗೆ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಪ್ರಸಕ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಅವರನ್ನು ಗೌರವಿಸಿದೆ.

ಮದ್ದಳೆ ವಾದನ

ಎಸ್.ಎಂ.ಕೃಷ್ಣಾನಗರ
ಆಶ್ರಯ ಕಾಲೋನಿ
ನಂ.೬೬, ಹೊಂಬಳಾ ನಾಕಾ
ಗದಗ ಜಿಲ್ಲೆ

ಶ್ರೀಮತಿ ಮುದಕವ್ವ ಮಾಳವ್ವ ಪೂಜಾರಿ

□

ಚೌಡಿಕೆ

ಚೌಡಿಕೆ ಕಲಾವಿದೆ
ಬಾಬು ಜಗಜೀವನರಾಮ ನಗರ
ಹುನಗುಂದ - ೫೮೭ ೧೧೮

ಕಳೆದ ಆರೇಳು ದಶಕಗಳಿಂದ ಚೌಡಿಕೆ ಕಲೆಯನ್ನು ಪ್ರದರ್ಶಿಸುತ್ತಾ ಬಂದಿರುವ ಶ್ರೀಮತಿ ಮುದಕವ್ವ ಮಾಳವ್ವ ಪೂಜಾರಿಗೆ ಈಗ ೭೩ ವರ್ಷ ವಯಸ್ಸು. ತಾಯಿ ಮಾಳವ್ವನಿಂದ ಚೌಡಿಕೆ ಗಾಯನ ಕಲಿತು, ತನ್ನ ಹನ್ನೆರಡನೇ ವಯಸ್ಸಿಗೆ ಹಾಡಲು ಆರಂಭಿಸಿದರು. ರೇಡಿಯೋ, ದೂರದರ್ಶನಗಳಲ್ಲಿ ನಿರಂತರವಾಗಿ ಹಾಡುತ್ತಾ ಬಂದಿರುವ ಮಾಳವ್ವಳ ಹಾಡುಗಳನ್ನು ೨೫ ವರ್ಷಗಳ ಹಿಂದೆ ನಾಡೋಜ ಎಚ್.ಎಲ್. ನಾಗೇಗೌಡರು ಧ್ವನಿ ಮುದ್ರಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಮನೆಮಾತಾಗಿರುವ ಇವರು ಚೌಡಿಕೆ ನುಡಿಸದ ವೇದಿಕೆಗಳಿಲ್ಲ, ಹಾಡದ ಮೇಳಗಳಿಲ್ಲ. ಅಷ್ಟರಮಟ್ಟಿಗೆ ಇವರ ಜನಪ್ರಿಯತೆ.

ಮೈಸೂರು ದಸರಾ ಉತ್ಸವ, ಚಾಲುಕ್ಯ ಉತ್ಸವ, ವಿಶ್ವಕನ್ನಡ ಸಮ್ಮೇಳನ, ಜಿಲ್ಲಾ ರಾಜ್ಯೋತ್ಸವ, ರಾಷ್ಟ್ರೀಯ ಜಾನಪದ ಲೋಕಕಲಾ ಯಾತ್ರೆಗಳಲ್ಲಿ ಭಾಗವಹಿಸಿದ್ದಾರೆ. ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಯಮ್ಮ ಮತ್ತು ಎಸ್.ಸಿ. ಮಲ್ಲಯ್ಯ ಜಾನಪದ ಕಲಾವಿದರ ಪ್ರಶಸ್ತಿ, ಸಾಹಿತ್ಯ ಸಮಾವೇಶ ಸುವರ್ಣ ಸಂಭ್ರಮ ಪ್ರಶಸ್ತಿ ಹೀಗೆ ನೂರಾರು ಪ್ರಶಸ್ತಿಗಳು ದೊರಕಿವೆ. ಇವರ ಸಾಧನೆಯನ್ನು ಕುರಿತು ನಾಡಿನ ಅನೇಕ ಪತ್ರಿಕೆಗಳು ಲೇಖನಗಳನ್ನು ಬರೆದು ಪ್ರಕಟಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಪ್ರಶಸ್ತಿ ಅವರ ಸಾಧನೆಗೆ ಸಂದ ಗೌರವ ಎಂದು ನಾಡು ಭಾವಿಸಿದೆ.

ಶ್ರೀ ಶಿವಲಿಂಗಪ್ಪಾ ಡಿಗ್ಗಿ

ಶಹನಾಯಿ

ವಿಜಯನಗರ
ಎಂ.ಎಸ್.ಕೆ. ಮಿಲ್ ರಸ್ತೆ
ಗುಲ್ಬರ್ಗಾ ೫೮೫ ೧೦೩

ಸುಮಾರು ೭೦ ವರ್ಷ ವಯಸ್ಸಿನ ಶಹನಾಯಿ ವಾದನ ಕಲಾವಿದ ಶ್ರೀ ಶಿವಲಿಂಗಪ್ಪ ಡಿಗ್ಗಿ ಅವರು ಗುಲ್ಬರ್ಗಾದ ವಿಜಯ ನಗರದವರು. ತಂದೆ ಶಂಕರ ಡಿಗ್ಗಿ, ತಾಯಿ ನಿಂಬಮ್ಮಾ. ಸ್ವತಃ ತಂದೆಯಿಂದಲೇ ಶಹನಾಯಿ ವಾದನದ ದೀಕ್ಷೆ ಪಡೆದು, ಗುರು ಮುಖದಿಂದ ಬಂದದ್ದನ್ನು ಶ್ರದ್ಧಾಸಕ್ತಿಯಿಂದ ರೂಢಿಸಿಕೊಂಡು ಬಂದಿದ್ದಾರೆ. ತಂದೆ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಸಿದ್ಧ ಶಹನಾಯಿ ವಾದಕರಾಗಿ ಹೆಸರು ಪಡೆದವರು. ಶಿವಲಿಂಗಪ್ಪ ತಂದೆಯಂತೆ ತಾವೂ ಶಹನಾಯಿ ಕಲೆಯಲ್ಲಿ ಅಪಾರ ಪರಿಶ್ರಮ ಪಡೆದು, ತಮ್ಮ ಮಕ್ಕಳಿಗೂ ಈ ಕಲೆಯ ಹುಚ್ಚು ಹತ್ತಿಸಿದ್ದಾರೆ. ಅನೇಕ ಶಿಷ್ಯರನ್ನು ಹೊಂದಿರುವ ಶ್ರೀಯುತರು ಗುಲ್ಬರ್ಗಾ ಆಕಾಶವಾಣಿಯ 'ಬಿ' ಗ್ರೇಡ್ ಕಲಾವಿದರು.

ನಾಡಿನ ಪ್ರಮುಖ ಕಾರ್ಯಕ್ರಮಗಳಲ್ಲಿ ಶಹನಾಯಿ ನುಡಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಹುತೇಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ತಾವೂ ಬೆಳೆದು ತಮ್ಮ ಶಿಷ್ಯರನ್ನೂ ಬೆಳೆಸಿರುವ ಈ ಅಪರೂಪದ ಕಲಾವಿದರಿಗೆ ನಾಡು ಸನ್ಮಾನ ಗೌರವಗಳನ್ನು ಸಲ್ಲಿಸದೆ. ಈಗ ಇವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಶ್ರೀ ಗುರುನಾಥ ಕೋಟೆ

ದೊಡ್ಡಾಟ

ಜೀರಗಾ, ಔರಾದ್ ತಾಲ್ಲೂಕು
ಬೀದರ ಜಿಲ್ಲೆ

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಜೀರಗಾ ಗ್ರಾಮದ ಶ್ರೀ ಗುರುನಾಥ ಕೋಟೆ ಅವರು ಪೌರಾಣಿಕ ನಾಟಕ ದೊಡ್ಡಾಟದ ಬಹುದೊಡ್ಡ ಕಲಾವಿದರು. ಏಳನೇ ಇಯತ್ತೆ ಪಾಸು ಮಾಡಿರುವ ಶ್ರೀಯುತರು ಒಕ್ಕಲುತನ ಮಾಡಿಕೊಂಡು ಶಾಲಾ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿ ಅನೇಕ ವಿದ್ಯಾರ್ಥಿಗಳನ್ನು ಬೆಳೆಸಿದ್ದಾರೆ. ೧.೫.೧೯೩೬ರಲ್ಲಿ ಜನಿಸಿದ ಗುರುನಾಥ ಅವರ ತಂದೆ ಉಂಗರ ಶೆಟ್ಟಿ ಕೋಟೆ, ತಾಯಿ ರತ್ನಮ್ಮ. ತಮ್ಮ ೧೬ನೇ ವಯಸ್ಸಿನಲ್ಲಿ ಪೌರಾಣಿಕ ನಾಟಕ ದೊಡ್ಡಾಟಕ್ಕೆ ಪ್ರವೇಶ ಮಾಡಿದರು.

ಅನೇಕ ಪಾತ್ರಗಳನ್ನು ಮಾಡಿ ಜನಮನ್ನಣೆ ಗಳಿಸಿದ ಮೇಲೆ ತಮ್ಮ ಅಭಿನಯಾನುಭವವನ್ನು ಧಾರೆಯೆರೆಯಬೇಕೆಂದು, ಸುಮಾರು ನಾಟಕಗಳ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರುಶಿಷ್ಯ ಪರಂಪರೆ ಯೋಜನೆಯಡಿಯಲ್ಲಿ ದೊಡ್ಡಾಟ ಕಲಿಕಾ ಕೇಂದ್ರಕ್ಕೆ ಗುರುಗಳಾಗಿ ತರಬೇತಿ ನೀಡಿದ್ದಾರೆ. ಸುಗ್ಗಿ ಯೋಜನೆಯಡಿ ದೊಡ್ಡಾಟ ಪ್ರದರ್ಶನ ಮಾಡಿದ್ದಾರೆ.

ತಮ್ಮ ಭಾಗದ ಸಾಂಸ್ಕೃತಿಕ ಪ್ರಪಂಚದಲ್ಲಿ ಛಾಪು ಮೂಡಿಸಿರುವ ಗುರುನಾಥ ಕೋಟೆಯವರು 'ಶಿವಲಿಂಗೇಶ್ವರ ನಾಟಕ ಸಂಘ (ರಿ)'ವನ್ನು ಕಟ್ಟಿಕೊಂಡು ಸತತವಾಗಿ ಯುವಕರಿಗೆ ದೊಡ್ಡಾಟ ತರಬೇತಿ ನೀಡಿ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದಾರೆ. ಶ್ರೀಯುತರ ಸೇವೆಯನ್ನು ಗುರುತಿಸಿ ಪ್ರತಿಷ್ಠಿತ ಸಂಘ-ಸಂಸ್ಥೆಗಳು, ಮಠ-ಮಾನ್ಯರು ಅವರನ್ನು ಸನ್ಮಾನಿಸಿದ್ದಾರೆ. ಈಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗುರನಾಥ ಕೋಟೆಯವರಿಗೆ ೨೦೦೬ನೇ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀ ಎಂ. ಮಾರಪ್ಪ

ಹಗಲು ವೇಷ

ಜಾನಪದ ಕಲಾವಿದರು,
ಯಾಪಲಪರ್ವಿ
ಸಿಂಧನೂರು ತಾಲ್ಲೂಕು
ರಾಯಚೂರು ಜಿಲ್ಲೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಯಾಪಲಪರ್ವಿ ಗ್ರಾಮದ ಶ್ರೀ ಎಂ. ಮಾರೆಪ್ಪ ಹಗಲು ವೇಷಧಾರಿ ಕಲಾವಿದ. ಕನ್ನಡ, ತಮಿಳು, ಹಿಂದಿ ಮತ್ತು ತೆಲುಗು ಮಾತನಾಡಬಲ್ಲ ಇವರು ಅಲೆಮಾರಿ ಜನಾಂಗಕ್ಕೆ ಸೇರಿದವರು. ಹಗಲು ವೇಳೆ ವೇಷವನ್ನು ಹಾಕಿಕೊಂಡು ಭಿಕ್ಷಾಟನೆ ಮಾಡುವುದು ಇವರ ವೃತ್ತಿ.

೬೦ ವರ್ಷದ ಈ ಕಲಾವಿದ ಜಟಾಸುರನ ವಧೆ, ರಾಮಾಯಣ, ಸಿಂಧೂರ ಲಕ್ಷ್ಮಣ, ಭೀಮಾಂಜನೇಯ ಯುದ್ಧ, ಸುಂದ ಉಪಸುಂದರ, ಮೋಹಿನಿ ಭಸ್ಮಾಸುರ, ಮುಂತಾದ ವೇಷಗಳನ್ನು ಹಾಕುತ್ತಾರೆ. ತಮ್ಮದೇ ಆದ ಕಲಾತಂಡವನ್ನು ಕಟ್ಟಿಕೊಂಡು ಹಗಲುವೇಷ ಹಾಕುವ ಶ್ರೀಯುತರು ಅನೇಕ ಕಡೆ ಪ್ರದರ್ಶನ ನೀಡಿದ್ದಾರೆ. ರಾಯಚೂರು, ಸಿಂಧನೂರು, ಮಾನ್ವಿ ಹಾಗೂ ಸುತ್ತಲಿನ ಹಳ್ಳಿಗಳಲ್ಲಿ ಸುತ್ತಾಡಿ ತಮ್ಮ ಕಲಾಪ್ರದರ್ಶನವನ್ನು ನೀಡಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಅಲ್ಲದೆ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಹಾಗೂ ಮಧ್ಯ ಪ್ರದೇಶಗಳಲ್ಲಿಯೂ ಹಗಲುವೇಷ ಪ್ರದರ್ಶನ ಮಾಡಿ ಜನರಿಂದ 'ಬೇಷ್' ಎನ್ನಿಸಿಕೊಂಡಿದ್ದಾರೆ. ಶ್ರೀ ಎಂ. ಮಾರೆಪ್ಪ ಅವರಿಗೆ ಬಾದರ್ಲಿ, ಹಂಪನಗೌಡ ಪ್ರಶಸ್ತಿ, ಜವಳಗೇರಾ ಕ್ಷೇತ್ರ ಪ್ರಶಸ್ತಿ, ಮೈಸೂರು ದಸರಾ ಮಹೋತ್ಸವ ಪ್ರಶಸ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಶಸ್ತಿಗಳು ಲಭಿಸಿವೆ. ಪ್ರಸಕ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ.

ಶ್ರೀಮತಿ ಬಿ. ಮಂಜಮ್ಮ
ಜೋಗತಿ

ಜೋಗತಿ ನೃತ್ಯ

ಗೊಲ್ಲರಹಳ್ಳಿ ಗ್ರಾಮ
ಡಣಾಯಕನಕೆರೆ ಅಂಚೆ
ಹೊಸಪೇಟೆ ತಾಲ್ಲೂಕು
ಬಳ್ಳಾರಿ ಜಿಲ್ಲೆ - ೫೮೩ ೨೨೨

ಶ್ರೀಮತಿ ಬಿ. ಮಂಜಮ್ಮ ಜೋಗತಿ, ಶ್ರೀ ಬಿ. ಹನುಮಂತ ಶೆಟ್ಟಿ ಮತ್ತು ಶ್ರೀಮತಿ ಬಿ. ಜಯಮ್ಮ ಅವರ ಸುಪುತ್ರಿ. ೧೮.೪.೬೮ರಲ್ಲಿ ಜನಿಸಿದ ಈಕೆ ೧೯೮೫ರಲ್ಲಿ ಜೋಗತಿ ದೀಕ್ಷೆ ಪಡೆದುಕೊಂಡಳು. ಅಂದಿನಿಂದ ತನ್ನ ವ್ರತನಿಷ್ಠೆಯೊಂದಿಗೆ ಜೋಗತಿ ನೃತ್ಯವನ್ನು ಕಲಿತುಕೊಂಡಳು. ರಾಜ್ಯ ಪ್ರಶಸ್ತಿ ವಿಜೇತೆ ಕಾಳವ್ವ ಜೋಗತಿಯೊಂದಿಗೆ ಸೇರಿ ಆಕೆಯನ್ನೇ ಗುರುವೆಂದು ಭಾವಿಸಿ ಜೋಗತಿ ನೃತ್ಯ ಪ್ರದರ್ಶಿಸುತ್ತಾ ಬಂದಿರುವರು. ಶ್ರೀ ರೇಣುಕಾದೇವಿ ಚರಿತ್ರೆಯಾಧಾರಿತ ನಾಟಕದ ಮುಖ್ಯ ಹಾಡುಗಾರ್ತಿಯಾಗಿಯೂ ಇವರು ಹೆಸರು ಮಾಡಿದ್ದಾರೆ. ಆ ನಾಟಕದಲ್ಲಿ ಗೌಡಶಾನಿ, ಕಾಮಧೇನು ಮತ್ತು ಪರಶುರಾಮರ ಪಾತ್ರ ಹಾಗೂ ರೇಣುಕಾದೇವಿಯ ಪಾತ್ರವನ್ನು ಮಾಡಿರುವುದಾಗಿ ನೆನಪಿಸಿಕೊಳ್ಳುತ್ತಾರೆ. ರಾಣಿಬೆನ್ನೂರು, ಹರಿಹರ, ಹುಬ್ಬಳ್ಳಿ, ದಾವಣಗೆರೆ, ರಾಯಚೂರು, ಬಳ್ಳಾರಿ ಮುಂತಾದ ಕಡೆ ೫೦೦ಕ್ಕೂ ಹೆಚ್ಚು ಪ್ರದರ್ಶನಗೊಂಡಿರುವ ರೇಣುಕಾದೇವಿ ಮಹಾತ್ಮೆ ನಾಟಕದ ಕೇಂದ್ರ ಬಿಂದುವಾಗಿ ಇವರು ರಂಗದ ಮೇಲೆ ಕಾಣಿಸಿಕೊಂಡಿದ್ದಾರೆ.

ಶ್ರೀಮತಿ ಮಂಜಮ್ಮ ಅನೇಕ ಬಯಲಾಟಗಳಲ್ಲಿ ನರ್ತಕಿಯಾಗಿಯೂ ಕಾಣಿಸಿಕೊಂಡಿದ್ದಾರೆ. ಆರೋಗ್ಯ ಇಲಾಖೆಯ ಪರಿಸರ ನೈರ್ಮಲ್ಯ, ಪಲ್ಸ್ ಪೋಲಿಯೊ, ಏಡ್ಸ್ ಹಾಗೂ ಗರ್ಭಿಣಿ ಸ್ತ್ರೀಯರ ಕುರಿತ ಕಾರ್ಯಕ್ರಮಗಳಲ್ಲಿಯೂ ಪರಿಶ್ರಮ ಇರುವ ಇವರು ನಾಡಿನಾದ್ಯಂತ ಅನೇಕ ಕಡೆ ಜೋಗತಿ ನೃತ್ಯ ಪ್ರದರ್ಶನ ಮಾಡಿದ್ದಾರೆ. ದೂರದರ್ಶನ ಚಂದನ ವಾಹಿನಿಯಲ್ಲಿ ಕಾಣಿಸಿಕೊಂಡಿರುವ ಇವರನ್ನು ಅನೇಕ ಕಡೆ ಸನ್ಮಾನಿಸಲಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ಸಾಲಿನ ಪ್ರಶಸ್ತಿ ನೀಡಿ ಮಂಜಮ್ಮ ಜೋಗತಿಯನ್ನು ಗೌರವಿಸಿದೆ.



ಶ್ರೀ ರೇಚಪ್ಪ ಮಾಸ್ತರ

ದೊಡ್ಡಾಟ ನಿರ್ದೇಶನ

ಗದಗ
ಕೊಪ್ಪಳ್ಳಿ ಜಿಲ್ಲೆ

ಬಯಲಾಟದ ಕಲಾವಿದರಾದ ಶ್ರೀ ರೇಚಪ್ಪ ಮಾಸ್ತರರಿಗೆ ಈಗ ಎಂಭತ್ತರ ಹರೆಯ. ಈಗಲೂ ರಂಗಾಸಕ್ತಿಯನ್ನು ಉಳಿಸಿಕೊಂಡಿ ರಸಾವೇಶದಿಂದ ಬಯಲಾಟದಲ್ಲಿ ಪಾತ್ರಮಾಡುವ ಇವರ ಅಭಿನಯ ಅಪ್ರತಿಮವಾದುದು, ಹಾಡು ಮಾಧುರ್ಯವಾದುದು, ನಿರ್ದೇಶನ ಕಲಾ ಪ್ರೌಢಿಮೆಯಿಂದ ಕೂಡಿದುದು.

ವಂಶಪಾರಂಪರ್ಯವಾಗಿ ಬಂದಿರುವ ಈ ಕಲಾ ಕೌಶಲ್ಯವನ್ನು ಶ್ರೀಯುತರು ತಂದೆ ಮತ್ತು ಅಜ್ಜಿಯಿಂದ ಕಲಿತು ಬಾಲ್ಯದಲ್ಲಿಯೇ ಬಯಲಾಟದೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಬದುಕು ಬಡತನದಲ್ಲಿ ಸಾಗಿದರೂ, ಕಲೆ ಶ್ರೀಮಂತಿಕೆ ಹಾಗೂ ಗೌರವದಿಂದ ನಿರಂತರವಾಗಿ ಸಾಗಿಕೊಂಡು ಬಂದಿದೆ. ರೇಚಪ್ಪ ಮಾಸ್ತರರ ಕಲೆ, ಚೈತನ್ಯ, ಹುಮ್ಮಸ್ಸು ಅವರ ಬದುಕಿನ ಶ್ರೀಮಂತಿಕೆಯಾಗಿದೆ.

ಬಯಲಾಟಗಳ ನಿರ್ದೇಶನದಿಂದ ನಾಡಿನಾದ್ಯಂತ ಹೆಸರು ಮಾಡಿರುವ ಶ್ರೀಯುತರು ದ್ರೋಣಪರ್ವ, ವಿರಾಟ ಪರ್ವ, ಕರ್ಣಪರ್ವ, ಪ್ರಮೀಳಾ ದರ್ಬಾರು, ಬಬ್ರುವಾಹನ ಕಾಳಗ, ಕಿರಾತಾರ್ಜುನ ಕಾಳಗ, ಕುರುಕ್ಷೇತ್ರ ಮುಂತಾದ ಬಯಲಾಟಗಳನ್ನು ನಿರ್ದೇಶಿಸಿದ್ದಾರೆ.

ಸುಮಾರು ನಾಲ್ಕು ದಶಕಗಳಿಂದ ಜನಪದ ರಂಗಭೂಮಿಯ ಸೇವೆ ಮಾಡುತ್ತಾ ಬಂದಿರುವ ಬಯಲಾಟದ ಪಟು ಶ್ರೀ ರೇಚಪ್ಪ ಸಿದ್ದಲಿಂಗಪ್ಪ ಮಡಿವಾಳ ಅವರಿಗೆ ಪ್ರಸ್ತುತ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿರುವುದು ಅವರ ವೃತ್ತಿಗೆ ಮತ್ತೊಂದು ಗರಿ ಮೂಡಿಸಿದೆ.



ಶ್ರೀ ಪುರುಷೋತ್ತಮ ಬಿಳಿಮಲೆ

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಪಂಜಾದಲ್ಲಿ ಜನಿಸಿದ (೨೧.೦೮.೧೯೫೫) ಡಾ. ಪುರುಷೋತ್ತಮ ಬಿಳಿಮಲೆ ಶಿಷ್ಟ ಹಾಗೂ ಜಾನಪದ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಪ್ರತಿಭಾವಂತ ಲೇಖಕರು ಹಾಗೂ ಸಂಘಟಕರು. ತುಳು, ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳನ್ನು ಬಲ್ಲ ಇವರು ಕನ್ನಡ ಸಾಹಿತ್ಯ, ಜಾನಪದ, ಪುರಾತನಶಾಸ್ತ್ರ, ಸಾಂಸ್ಕೃತಿಕ ಅಧ್ಯಯನ ಹಾಗೂ ಯಕ್ಷಗಾನಗಳನ್ನು ತಮ್ಮ ಆಯ್ಕೆಯ ಕ್ಷೇತ್ರವಾಗಿಸಿಕೊಂಡು ದುಡಿಯುತ್ತಿದ್ದಾರೆ.

ಮೆಕೆಂಜಿ ಕೈಫಿಯತ್ತುಗಳು, ಲಿಂಗರಾಜನ ಹುಕುಂ ನಾಮೆ, ಕಂಬುಲ, ದಲಿತ ಜಗತ್ತು, ಬಂಡಾಯ ದಲಿತ ಸಾಹಿತ್ಯ, ಕರಾವಳಿ ಜಾನಪದ, ಶಿಷ್ಟ-ಪರಿಶಿಷ್ಟ, ಕೊರಗರು, ಜಾನಪದ ಕ್ಷೇತ್ರ ಕಾರ್ಯ, ಕೋಮುವಾದ ಮತ್ತು ಜನಸಂಸ್ಕೃತಿ, ಹಂಪಿ ಜಾನಪದ, ಕೂಡುಕಟ್ಟು, ಹುಲಿಗೆಮ್ಮ ಮತ್ತು ಕುಮಾರರಾಮ ಇವರ ಪ್ರಮುಖ ಕೃತಿ ರತ್ನಗಳು. ಇವಲ್ಲದೆ ಸುಮಾರು ಹತ್ತಾರು ಕೃತಿಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಯಕ್ಷಗಾನ ಪ್ರಸಂಗಗಳು ಮತ್ತು ಅಕ್ಷರ ವಿಮೋಚನೆ ಪ್ರಮುಖವಾದವು.

ಹೊರನಾಡು ಪ್ರಶಸ್ತಿ

ಪ್ರಸಕ್ತ ನವದೆಹಲಿಯ ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಹೊರನಾಡಿನಲ್ಲಿ ಕನ್ನಡವನ್ನು ಬಿತ್ತುವ/ಪ್ರಚಾರ ಮಾಡುವ ಕಾಯಕವನ್ನು ಕೈಗೊಂಡಿದ್ದಾರೆ. ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ಈ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಹೊರನಾಡ ಜಾನಪದ ಕನ್ನಡಿಗ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

೬೦೯೮/೮, ಡಿ-೬,
ವಸಂತ್ ಕುಂಜ್
ನವದೆಹಲಿ - ೧೧೦ ೦೭೦



ಶ್ರೀ ಹೆಚ್.ಎಸ್. ಬಂಗಾರು

ಸುಮಾರು ೭೮ ವರ್ಷ ವಯಸ್ಸಿನ ಶ್ರೀ ಹೆಚ್.ಎಸ್.ಬಂಗಾರು ಹಾಸನದವರು. ೩೧.೫.೧೯೩೦ರಲ್ಲಿ ಜನಿಸಿದ ಇವರ ತಂದೆ ಸಂಜೀವ ಜಟ್ಟಪ್ಪ, ತಾಯಿ ಸಾವಿತ್ರಮ್ಮ. ಬಾಲ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಶಾಲೆಗೆ ತಿಲಾಂಜಲಿ ಇಟ್ಟರು. ಚಳುವಳಿಯ ಜೊತೆ ಜೊತೆಗೆ ಜನಪದ ಗೀತೆಗಳನ್ನು ಕಲಿಯುತ್ತಾ ಊರೂರು ತಿರುಗಿದರು. ಚಳುವಳಿಯ ಅಂಗವಾಗಿ ಕೀಲು ಕುದುರೆ ಕುಣಿಸುತ್ತಿದ್ದು ದನ್ನು ಕಂಡು, ಆ ಕಲೆಗೆ ಮರುಳಾಗಿ ಶ್ರೀಯುತರು ಕೀಲುಕುದುರೆ ಕುಣಿತವನ್ನು ತಮಿಳುನಾಡಿಗೆ ಹೋಗಿ ಕಲಿತುಕೊಂಡು ಬಂದರು. ಕೀಲುಕುದುರೆ ಕಲೆಯಲ್ಲಿ ಅಪ್ರತಿಮ ಸಾಧನೆ ಮಾಡಿ, ೨೪ ಜನರ ತಂಡವನ್ನು ಕಟ್ಟಿಕೊಂಡು ಅದನ್ನು ಮುನ್ನಡೆಸುತ್ತಾ ಬಂದಿದ್ದಾರೆ.

ಕೀಲು ಕುದುರೆ

ಕಳೆದ ೫೦ ವರ್ಷಗಳಿಂದ ಕೀಲು ಕುದುರೆ ಕುಣಿಸುತ್ತಾ, ಕೀಲು ಕುದುರೆ ತಯಾರು ಮಾಡುತ್ತ ಬಂದಿರುವ ಬಂಗಾರು ಅವರು ಹಾಸನ, ಚಿಕ್ಕಮಗಳೂರು, ಮಂಗಳೂರು, ಮಡಿಕೇರಿ, ಮೈಸೂರು, ಚಾಮರಾಜನಗರ, ಮಂಡ್ಯ ಮುಂತಾದ ಜಿಲ್ಲೆಗಳಲ್ಲಿ ಯಶಸ್ವಿ ಪ್ರದರ್ಶನ ನೀಡಿ ಜನಪ್ರಿಯತೆ ಗಳಿಸಿದ್ದಾರೆ. ಜಾತ್ರೆ, ಗಣಪತಿ ಉತ್ಸವ, ಹಬ್ಬ-ಹರಿದಿನ ಹಾಗೂ ಮದುವೆ-ಮುಂಜಿಗಳಲ್ಲಿ ಕೀಲುಕುದುರೆ ಕುಣಿಸುವ ಈ ಕಲಾವಿದರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ಈಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ಸಾಲಿನ ಪ್ರಶಸ್ತಿ ನೀಡಿ ಅವರನ್ನು ಗೌರವಿಸಿದೆ.

ನಂ.೪೬೭೪
ವಲ್ಲಬಾಯಿ ರಸ್ತೆ, ೩ನೇ ಕ್ರಾಸ್
ಹಾಸನ.



ಶ್ರೀ ಶ್ರೀಧರ ಹಂದೆ

ಸಂಘಾಟನೆ

ಪಾರಂಪಳ್ಳಿ, ಪಡುಕೆರೆ
ಉಡುಪಿ ತಾಲ್ಲೂಕು.

ಬಾಲ್ಯದಿಂದಲೂ ಮನೆಯ ಸುತ್ತಮುತ್ತ ಕಣ್ಣು-ಕಿವಿಗಳಲ್ಲಿ ಅಯಾಚಿತವಾಗಿ ತುಂಬಿಕೊಳ್ಳುತ್ತಿದ್ದ ಯಕ್ಷಗಾನ, ಹರಿಕತೆ, ಭಜನೆ ಪ್ರಕಾರಗಳಿಂದ ಮೈಗೂಡಿಸಿಕೊಂಡು ಕಲಾಗಂಧದ ಜೊತೆಗೆ ಹೋಟೆಲ್ ಉದ್ಯಮವನ್ನು ನಡೆಸಿಕೊಂಡು ಬಂದ ಹಿರಿಮೆ ಪಾರಂಪಳ್ಳಿ ಶ್ರೀಧರ ಹಂದೆ ಅವರದು. ೨.೧೨.೧೯೨೮ರಲ್ಲಿ ಜನಿಸಿದ ಹಂದೆಯವರ ತಂದೆ ಪದ್ಮನಾಭ ಹಂದೆ, ತಾಯಿ ವಾಗ್ದೇವಿ. ಯಕ್ಷಗಾನ ಕಲೆಗೆ ಮನಸೋತು ಅದನ್ನು ಪ್ರವೃತ್ತಿಯಾಗಿಸಿಕೊಂಡ ಶ್ರೀಯುತರು ಯಕ್ಷಗಾನದ ಹಲವು ಪ್ರಕಾರಗಳಲ್ಲಿ ದುಡಿದವರು. ವೀರಭದ್ರ ನಾಯಕ್, ಹಾರಾಡಿ ರಾಮ, ಕುಷ್ಟ ಮುಂತಾದ ಕಲಾವಿದರ ಕುಣಿತಗಳನ್ನು ಕಂಡು ಗೆಜ್ಜೆಕಟ್ಟಿ ಹೆಜ್ಜೆ ಇಟ್ಟವರು. ಹವ್ಯಾಸಿ ಕಲಾವಿದರಾಗಿ ಬೆಳೆದ ಇವರು ನೃತ್ಯ, ನಟನೆ, ಅರ್ಥಗಾರಿಕೆ ಮೊದಲಾದ ರಂಗಗಳಲ್ಲಿ ಪರಿಣಿತರು. ಭೀಮ, ಭೀಷ್ಮ, ಪರಶುರಾಮ, ಅರ್ಜುನ ಇತ್ಯಾದಿ ಎರಡನೇ ವೇಷಗಳನ್ನು ಜನ ಮೆಚ್ಚುವಂತೆ ಮಾಡಿದರು. ಇವರ ಜಾಂಬವಂತ ಒಂದು ಅದ್ಭುತ ಪಾತ್ರ ಸೃಷ್ಟಿ. ದೇಶದ ಬೇರೆ ಬೇರೆ ಕಡೆಗಳಲ್ಲಿ ತಮ್ಮ ಅಭಿನಯ ಮೆರೆದವರು ಶ್ರೀ ಹಂದೆಯವರು.

ಬೇರೆ ಮೇಳಗಳಿಗೆ ಕಾಯಕಲ್ಪ ನೀಡಿದ ಹಂದೆಯವರು ಮಿತಭಾಷಿ, ಹಠವಾದಿ, ಆಶಿಸಿದ್ದನ್ನು ಹೊಂದಿಯೇ ತೀರುತ್ತೇನೆ ಎಂಬ ಛಲ. ಹೀಗಾಗಿ ಯಕ್ಷಗಾನದಿಂದ ಅವರು ಪಡೆದಷ್ಟನ್ನೇ ಅದಕ್ಕೆ ನೀಡಿದ್ದಾರೆ. ಇವರ ಕಲಾಸೇವೆ ಹಾಗೂ ಕಲಾಪ್ರೌಢಿಮೆಗೆ ಸಂದ ಸನ್ಮಾನಗಳು ಅಪಾರ, ಸಾರ್ವಜನಿಕ ಪ್ರಶಸ್ತಿಗಳು ಅತ್ಯಪಾರ. ಯಕ್ಷಗಾನದ ತೆಂಕತಿಟ್ಟು ಮತ್ತು ಬಡಗುತಿಟ್ಟು ಕಲಾವಿದರ ನಡುವೆ ಉತ್ತಮ ಬಾಂಧವ್ಯ ಕಲ್ಪಿಸಿದ ಪಾರಂಪಳ್ಳಿ ಶ್ರೀಧರ ಹಂದೆಯರಿಗೆ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ, ತನ್ನನ್ನೇ ತಾನು ಸನ್ಮಾನಿಸಿಕೊಂಡಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಬೆಂಗಳೂರು

ಶ್ರೀ ಕೆರೆಮನೆ ಶಂಭುಹೆಗಡೆ
ಅಧ್ಯಕ್ಷರು

ಶ್ರೀ ಎಂ. ಮುನಿರಾಜು
ರಿಜಿಸ್ಟ್ರಾರ್

ಸದಸ್ಯರು

ಶ್ರೀಮತಿ ಭೋವಿ ಜಯಮ್ಮ

ಶ್ರೀ ಗವೀಶ್ ವಿ. ಹಿರೇಮಠ

ಶ್ರೀಮತಿ ಸಕ್ರೆವ್ವಾ ಯಲ್ಲವ್ವಾ ಪಾತ್ರೋಟ

ಶ್ರೀಮತಿ ರೇಣವ್ವ ವಿರೂಪಾಕ್ಷಪ್ಪ ಕ್ಷತ್ರಿ

ಡಾ. ಹಂಪನಹಳ್ಳಿ ತಿಮ್ಮೇಗೌಡ

ಶ್ರೀ ಐರೋಡಿ ಗೋವಿಂದಪ್ಪ

ಶ್ರೀಮತಿ ಗಿರಿಜಾ ಮಲ್ಲಪ್ಪ ಕರ್ಪೂರ

ಶ್ರೀ ಅರಾಟೆ ಮಂಜುನಾಥ

ಡಾ. ಬಿ.ಎಸ್. ತಲ್ವಾಡಿ

ಡಾ. ಕೆ. ಚಿನ್ನಪ್ಪಗೌಡ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಶ್ರೀ ಬಿ.ಟಿ. ಮುನಿರಾಜಯ್ಯ, ಜಂಟಿ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಶ್ರೀ ಜೆ.ಎನ್.ಶ್ಯಾಮರಾವ್, ಲೆಕ್ಕಪತ್ರಾಧಿಕಾರಿ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ


ಡಾ. ಎಚ್.ಎಲ್.ನಾಗೇಗೌಡ

ಡಾ. ಜೀಶಂಪ


ಡಾ. ಎಸ್.ಕೆ. ಕರೀಂಖಾನ್

ಡಾ. ಎಚ್.ಜೆ. ಲಕ್ಕಪ್ಪಗೌಡ


ಡಾ. ಕಾಳೇಗೌಡ ನಾಗವಾರ

ಡಾ. ಹಿ.ಶಿ.ರಾಮಚಂದ್ರೇಗೌಡ


ಶ್ರೀ ಕೆರೆಮನೆ ಶಂಭುಹೆಗಡೆ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು